ಸಂಪುಟ: 15 Volume | ಸಂಚಿಕೆ: 01 Issue | ಪುಟಗಳು 08 Pages | ಬುಧವಾರ 01 ಏಪ್ರಿಲ್ 2026 | ₹4 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ , ಕೌಡಾಳೆ

**ಬೆಳಗು**

ಅನ್ಯರನ್ನು ಆಳು ಮಾಡದೆ, ತನ್ನ ತಾನಾಳಿದರೆ ಅದೇ ಬಿಡುಗಡೆ.

–ದ.ರಾ.ಬೇಂದ್ರೆ

## ಶ್ರಮದ ಮೂಲಕ ಜನರ ಮನಗೆದ್ದ ಜನ ಮಾನಸದ ಜನ ನಾಯಕ

**ಮಾಜಿ ಸಚಿವ ರಾಜಶೇಖರ್ ಬಸವರಾಜಪಾಟಿಲ್ ಅವರ ಹುಟ್ಟು ಹಬ್ಬಕ್ಕೆ ಕ್ಷೇತ್ರದ ಜನತೆ ಶುಭ ಹಾರೈಕೆ**



ಇಂದು ಬೀದರ್ ಜಿಲ್ಲೆ ಎಂದರೆ ಎಲ್ಲರಿಗೂ ಗೊತ್ತಿದೆ. ಅದರಲ್ಲೂ ಹುಮನಾಬಾದ್ ಕ್ಷೇತ್ರವೆಂದರೆ ಪ್ರತಿಯೊಬ್ಬರಿಗೂ ಚಿರಪರಿಚಿತವಾಗಿದೆ. ಇದರ ಅಭಿವೃದ್ಧಿಯಹಿಂದೆ ಮಾಜಿ ಸಚಿವ ರಾಜಶೇಖರ್ ಬಸವರಾಜಪಾಟಿಲ್ ಅವರ ಶ್ರಮ ಅಡಗಿದೆ ಎನ್ನುವುದು ಇಲ್ಲಿ ಪ್ರಸ್ತುತವಾಗಿದೆ. ಒಂದು ಕ್ಷೇತ್ರದ ಹೆಸರು ಇಡೀ ರಾಜ್ಯಕ್ಕೆ ಮಾದರಿಯಾಗುವಂತೆ ರೂಪಿಸುವುದಕ್ಕೆ ಪಾಟೀಲರ ಕೊಡುಗೆ ಮಹತ್ವದ್ದಾಗಿದೆ. ಅವರು ಹಲವು ವರ್ಷಗಳ ಕಾಲ ಹುಮನಾಬಾದ್ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಕಾರ್ಯನಿರ್ವಹಿಸಿ, ಕ್ಷೇತ್ರದ ಮೂಲಸೌಕರ್ಯ ಹಾಗೂ ಜನಸೇವೆಗಾಗಿ ಹಲವು ಕಾರ್ಯಗಳನ್ನು ಮಾಡಿದ್ದಾರೆ. ಒಂದು ಧರ್ಮ, ವರ್ಗಕ್ಕೆ ಸೀಮಿತವಾದೆ ಎಲ್ಲಾ ಸಮಾಜದವರನ್ನು ಒಟ್ಟಿಗೆ ತೆಗೆದುಕೊಂಡು ಹೋಗುವ ಜನ ಮಾನಸ ನಾಯಕರೆಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಹಿಂದುಳಿದ, ಅಲ್ಪ ಸಂಖ್ಯಾತ, ದೀನದಲಿತರನ್ನು ಸೇರಿದಂತೆ ಎಲ್ಲರು ತಮ್ಮ ಕುಟುಂಬದ ಸದಸ್ಯರಂತೆ ಕಾಣುವ ನೇರ ನುಡಿಯ, ಸರಳತೆಯೇ ಮೂರ್ತೀಭವಿಸಿದಂತೆ ಕಾಣುವ ಪಾಟೀಲರು, ಅಧಿಕಾರ ಇರಲಿ, ಬಿಡಲಿ, ತಮಗಾಗಿ, ತಮ್ಮ ಕುಟುಂಬಕ್ಕಾಗಿ ಚಿಂತಿಸಿದ್ದು ಬಹಳ ಕಡಿಮೆ. ಸದಾ ಕ್ಷೇತ್ರದ ಪ್ರಗತಿಯೇ ತಮ್ಮ ಉನ್ನತಿ ಎಂದು ಬಯಸಿದವರು, ಬಡವರ ಪುರೋಭಿವೃದ್ಧಿಯೇ ತಮ್ಮ ಖುಷಿ ಅಂತ ಚಿಂತಿಸಿದವರು. ಈ ಕಾರಣಕ್ಕೆ ಕ್ಷೇತ್ರದ ಜನತೆ ಇವರನ್ನು ಕಂಡರೆ ತಮ್ಮ ಮನೆಯ ಯಜಮಾನರೆಂದೇ ಭಾವಿಸುತ್ತಾರೆ. ತಮ್ಮ ಕಷ್ಟ ಸುಖ ಅವರ ಬಳಿ ತೋಡಿಕೊಳ್ಳುತ್ತಾರೆ. ತಿಥಿ ಇರಲಿ, ಶುಭ ಸಮಾರಂಭ ಇರಲಿ, ಮಕ್ಕಳ ನಾಮಕರಣ ಇರಲಿ, ಮದುವೆ ಮುಂಜಿ ಇರಲಿ..ಹೀಗೆ ಯಾವುದೇ ಕಾರ್ಯಗಳಿದ್ದರೂ ಪಾಟೀಲರನ್ನು ಜನತೆ ಆಹ್ವಾನಿಸುತ್ತಾರೆ. ಪಾಟೀಲರು ಕೂಡ ತಪ್ಪದೇ ಹಾಜರಾಗಿ ಸಹಾಯ ಮಾಡುತ್ತಾರೆ. ಅವರ ಎಲ್ಲಾ ಆಶೋತ್ತರಗಳಿಗೆ ಮಿಡಿಯುತ್ತಾರೆ. ಒಂದು ಕಡೆ ಅತಿವೃಷ್ಟಿ, ಇನ್ನೊಂದೆಡೆ ಅನಾವೃಷ್ಟಿ. ಇದೀಗ ಯುದ್ಧದ ಕಾರ್ಮೋಡ ಬೇರೆ. ಅಂದರೆ; ಇಷ್ಟೆಲ್ಲಾ ಕಷ್ಟಕಾರ್ಪಣ್ಯಗಳ ನಡುವೆ ಹುಟ್ಟು ಹಬ್ಬ ಬಂದೇ ಬಂತು..! ತಮ್ಮ ಅಭಿಮಾನಿಗಳಿಗೆ ಪಾಟೀಲರು, ಯಾವುದೇ ಕಾರಣಕ್ಕೂ ವಿಜೃಂಭಣೆಯ ಆಚರಣೆ ಬೇಡ. ಕ್ಷೇತ್ರದ ಜನರು ಕಷ್ಟದಲ್ಲಿದ್ದಾರೆ.

ಪುಟ 8






### ಕಮಲನಗರದಲ್ಲಿ ಎಚ್‌ಪಿವಿ ಲಸಿಕಾ ಅಭಿಯಾನಕ್ಕೆ ಚಾಲನೆ

# ಗರ್ಭಕಂಠ ಕ್ಯಾನ್ಸರ್ ತಡೆಗೆ ಲಸಿಕೆ ಅಸ್ತ್ರ: ಶ್ರೀಮಂತ ಮಡಿವಾಳ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಮಹಿಳೆಯರನ್ನು ಕಾಡುತ್ತಿರುವ ಗರ್ಭಕಂಠ ಕ್ಯಾನ್ಸರ್ (Cervical Cancer) ನಿಯಂತ್ರಿಸುವ ಉದ್ದೇಶದಿಂದ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ 14 ವರ್ಷ ಪೂರ್ಣಗೊಂಡು 15 ವರ್ಷ ತುಂಬದ ಹೆಣ್ಣುಮಕ್ಕಳಿಗೆ ಉಚಿತವಾಗಿ ಎ□□ಪಿವಿ (ಊಕಗಿ) ಲಸಿಕೆ ನೀಡುವ ಅಭಿಯಾನಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ಲಸಿಕೆಯ ಅಗತ್ಯತೆ ಮತ್ತು ಜಾಗೃತಿ

ಕಾರ್ಯಕ್ರಮದಲ್ಲಿ ಮಾತನಾಡಿದ ಆಸ್ಪತ್ರೆಯ ವೈದ್ಯಾಧಿಕಾರಿ ಶ್ರೀಮಂತ ಎಸ್.ಜಿ. ಮಡಿವಾಳ, ಮಹಿಳೆಯರಲ್ಲಿ ಕಂಡುಬರುವ ಕ್ಯಾನ್ಸರ್‌ಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಎರಡನೇ ಸ್ಥಾನದಲ್ಲಿದೆ. ಪ್ರತಿವರ್ಷ ಸಾವಿರಾರು ಹೊಸ ಪ್ರಕರಣಗಳು ವರದಿಯಾಗುತ್ತಿದ್ದು,

ಸಾವಿನ ಪ್ರಮಾಣವೂ ಹೆಚ್ಚುತ್ತಿದೆ.ಇದನ್ನು ತಡೆಗಟ್ಟಲು ಲಸಿಕೆ ಪಡೆಯುವುದು ಅನಿವಾರ್ಯವಾಗಿದೆ ಎಂದು ತಿಳಿಸಿದರು.

> “ ಪ್ರಸುಸ್ತ ಶಾಲಾ ಪರೀಕ್ಷೆಗಳು ನಡೆಯುತ್ತಿರುವುದರಿಂದ ಹಾಗೂ ಪೋಷಕರ ಸಮ್ಮತಿ ಪತ್ರಕಡ್ಡಾಯವಾಗಿರುವುದರಿಂದ ಅಭಿಯಾನ ಸ್ವಲ್ಪ ನಿಧಾನಗತಿಯಲ್ಲಿದೆ. ಪೋಷಕರು ಜಾಗೃತರಾಗಿ ತಮ್ಮ ಹೆಣ್ಣುಮಕ್ಕಳಿಗೆ ಲಸಿಕೆ ಹಾಕಿಸಬೇಕು.

ಸಮುದಾಯ ಆರೋಗ್ಯ ಕೇಂದ್ರಕ್ಕೆ ಒಟ್ಟು 150 ಲಸಿಕೆಗಳು ಪೂರೈಕೆಯಾಗಿವೆ.

ಅವಧಿ: ಈ ಅಭಿಯಾನವು ಮೇ 31 ರವರೆಗೆ ಮುಂದುವರಿಯಲಿದೆ. ಇದನ್ನು ನೀವು ತಾಲೂಕಿನ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರ ಹಾಗೂ ತಾಲೂಕ ಆಸ್ಪತ್ರೆಗಳಲ್ಲಿ ಲಸಿಕೆ ಪಡೆಯಬಹುದು.

ಈ ಸಂದರ್ಭದಲ್ಲಿ ಡಾ. ನಿತೀನ, ಸ್ಟಾಫ್ ನರ್ಸ್‌ಗಳಾದ ಚಂದ್ರಕಲಾ, ಪುಟ್ಟಮ್ಮಾ, ಫಹೀಮಾ, ನಂದಕುಮಾರಿ ಹಾಗೂ ಆಶಾ, ಫರನಾಜ್



ಸೇರಿದಂತೆ ಆಸ್ಪತ್ರೆಯ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

## ಬಿಡವೆ ಅವರಿಗೆ ಸಹಾಯಧನ ವಿತರಣೆ



• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ಶ್ರೀ ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೋಸಾಯಿಟಿ ಲಿ.ಯಕ್ಸಂಬಾ (ಮಲ್ಟಿ-ಸ್ಟೇಟ್) ಸ್ಥಳಿಯ ಶಾಖೆ-ಯ ಅಮೂಲ್ಯ ಸಾಲಗಾರರಾದ ಸನ್ಮುಕಪ್ಪ ಬಿಡವೆ ಅವರಿಗೆ ಸಹಾಯಧನ ವಿತರಿಸಲಾಯಿತು.

ಇಲ್ಲಿಯ ಶಾಖೆಯ ಅಮೂಲ್ಯ ಸಾಲಗಾರರಾದ ಪ್ರೀತಿ ಸನ್ಮುಖಪ್ಪ ಬಿಡವೆ ಅವರು ಇತ್ತಿಚಿಗೆ ನಿಧನರಾದ ಹಿನ್ನಲೆ ಸಂಸ್ಥೆಯಿಂದ ಕೊಡಲಾಗುವ 40. ಸಾವಿರ ರೂ. ಸಹಾಯ ಧನ ಸಲಹಾ ಸಮಿತಿ ಅಧ್ಯಕ್ಷರಾದ ಬಸವರಾಜ ವಿ. ವರವಟ್ಟೆ ಅವರು ವಿತರಿಸಿದರು. ಈ ವೇಳೆ ಸಾಲಗಾರರ ವಾರಸುದಾರರಾದ ಪರ್ತಾಪೂರದ ಸನ್ಮುಕಪ್ಪ ಬಿಡವೆ ಅವರನ್ನು ಶಾಖೆಗೆ ಕರೆಯಿಸಿ ಸಹಾಯಧನ ವಿತರಿಸಲಾಯಿತು.

ಇದೆ ವೇಳೆ ಸಂಸ್ಥೆಯ ಸಂಸ್ಥಾಪಕರಾದ ಅಣ್ಣಾಸಾಹೇಬ್ ಜೊಲ್ಲೆ, ಸಹ ಸಂಸ್ಥಾಪಕರಾದ ಶಶಿಕಲಾ ಜೊಲ್ಲೆ ಸೇರಿದಂತೆ ಮುಖ್ಯ ಕಚೇರಿಯ ಎಲ್ಲಾ ಆಡಳಿತ ವರ್ಗದವರಿಗೂ ಕೃತಜ್ಞತೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬಿಡಿಪಿಸಿ ಅಧ್ಯಕ್ಷರಾದ ಅನಿಲಕುಮಾರ ರಗಟೆ, ಶಾಖಾ ಸಲಹಾ ಸಮಿತಿ ಸದಸ್ಯರಾದ ಈರಣ್ಣಾ ಎಸ್. ಪಂಚಾಳ ಮಲ್ಲಿಕಾರ್ಜುನ ಚಿರಡೆ, ಅಭಿಷೇಕ ಆರ್. ನಂದಿ, ವ್ಯವಸ್ಥಾಪಕರಾದ ಚಿದಾನಂದ ಎಮ್. ಮಾಳಿ, ಸಿಬ್ಬಂದಿಗಳಾದ ಪ್ರಶಾಂತ ವರವಟ್ಟೆ, ಗಣೇಶ, ವಸ್ತ್ರದ, ಋಷಿಕೇಶ, ಮಿಥುನ ಹಾಗೂ ಧನರಾಜ ಬಟಗೇರಾ, ಚಂದ್ರಶೇಖರ ಇನ್ನಿತರರು ಉಪಸ್ಥಿತರಿದ್ದರು.

## ಟೋಕರಿ ಕೋಳಿ ಸಮಾಜದ ನೂತನ ತಾಲೂಕಾಧ್ಯಕ್ಷ ನರಸಪ್ಪಗೆ ಸನ್ಮಾನ

ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ತಾಲೂಕು ಟೋಕರಿ ಕೋಳಿ ಸಮಾಜದ ನೂತನ ತಾಲುಕಾಧ್ಯಕ್ಷರಾಗಿ ಆಯ್ಕೆಯಾದ ನರಸಪ್ಪ ಎಂ. ನರನಾಳ ಫಾತ್ಮಪುರ್ ರವರಿಗೆ ಮಂಗಳವಾರ ಪಟ್ಟಣದಲ್ಲಿ ಗೆಳೆಯರು ಸನ್ಮಾನಿಸಿ ಶುಭ ಕೋರಿದರು. ಈ ಸಂದರ್ಭದಲ್ಲಿ ಶಿವರಾಜ ಸ್ವಾಮಿ ನಂದಗಾಂವ, ಮುನೀರ ಪಟೇಲ್, ರಾಜಕುಮಾರ ಹಡಪದ, ಮಂಜುನಾಥ್ ಚಿಂತ-ಕೋಟಿ ಸೇರಿದಂತೆ ಇತರರು ಉಪಸ್ಥಿತರಿದ್ದರು.



## ಟೋಕರಿ ಕೋಳಿ ಸಮಾಜ ಪದಾಧಿಕಾರಿಗಳ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ

ತಾಲೂಕಿನ ಟೋಕರಿ ಕೋಳಿ ಸಮಾಜದ ತಾಲೂಕ ಪದಾಧಿಕಾರಿಗಳ ಆಯ್ಕೆ ತಾಲೂಕಿನ ನಿಂಗೋಳದ (ಮಾತಾ ಮಾಣಿಕೇಶ್ವರಿ) ಆಶ್ರಮದಲ್ಲಿ ಶಾಂತಿ ಬಾಬಾ ರವರ ದಿವ್ಯ ಸಾನಿಧ್ಯದಲ್ಲಿ ಹಾಗೂ ಜಿಲ್ಲಾಧ್ಯಕ್ಷ ಜಗನಾಥ ಜಮಾದರ್ ರವರ ನೇತೃತ್ವದಲ್ಲಿ ಮಂಗಳವಾರ ತಾಲೂಕ ಪದಾಧಿಕಾರಿಗಳ ಆಯ್ಕೆ ಜರುಗಿತ್ತು. ಅಧ್ಯಕ್ಷ ಸ್ಥಾನಕ್ಕೆ 5 ಜನ ಆಕಾಂಕ್ಷಿ ಇರುವುದರರಿಂದ ಮತ ಚಲಾಯಿಸುವ ಮೂಲಕ ತಾಲುಕಾಧ್ಯಕ್ಷರಾಗಿ ನರಸಪ್ಪ ಎಂ. ನರನಾಳ, ಗೌರವಾಧ್ಯಕ್ಷರಾಗಿ ಪುಂಡಲೀಕ ನಿಂಗನಬಾಡ, ಉಪಾಧ್ಯಕ್ಷರಾಗಿ ಬಾಬುರಾವ ವಳಖಂಡಿ, ಪ್ರಧಾನ ಕಾರ್ಯದರ್ಶಿಯಾಗಿ ವೀರಶೆಟ್ಟಿ ಮಾನಕರ್, ಸಲಹೆಗಾರರಾಗಿ ವಿಠಲರಾವ ಪಟ್ಟಣಕ್ಕರ್, ಕಾರ್ಯದರ್ಶಿಗಳಾಗಿ ಅಶೋಕ ಕಾಗೆ, ಕೋಶಾಧ್ಯಕ್ಷರಾಗಿ ಭೀಮರಾವ ಕೋಟಗಿ ಸೇರಿದಂತೆ ಒಟ್ಟು 19 ಜನರನ್ನು ಸದಸ್ಯರಾಗಿ ಆಯ್ಕೆಯಾಗಿದ್ದರೆಂದು ಜಿಲ್ಲಾಧ್ಯಕ್ಷ ಜಮಾದರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ಸುನೀಲ ಖಾಶೆಂಪುರ್, ಜಿಲ್ಲಾ ಕೋಶಾಧ್ಯಕ್ಷ ನಂದುಕುಮಾರ ಜಂಬಗಿಕರ್, ಮಾರುತಿ, ತಿಪಣ್ಣ, ಅರುಣಕುಮಾರ ಬಾವಗಿ, ಷಣ್ಮುಖಪ್ಪ, ಶಿವರಾಜ ಜಂಗಿರದಾರ, ಫಕೀರಪ್ಪ ಮುಸ್ತರಿ, ಪುಂಡಲೀಕ ಅರ್ಕಿ, ಶ್ರೀಕಾಂತ ಔರಂಗಬಾದ ಸೇರಿದಂತೆ ತಾಲೂಕಿನ ಟೋಕರಿ ಕೋಳಿ ಸಮಾಜದವರು ಮುಖಂಡರು ಉಪಸ್ಥಿತರಿದ್ದರು.

## ಬಸವ ತತ್ವ ಆಧ್ಯಾತ್ಮಿಕ ಪ್ರವಚನಕ್ಕೆ ಚಾಲನೆ



ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ಇಲ್ಲಿನ ಮಹಾತ್ಮ ಬಸವೇಶ್ವರರ ಜಾತ್ರಾ ಮಹೋತ್ಸವ ನಿಮಿತ್ಯ ಬಸವ ತತ್ವ ಆಧ್ಯಾತ್ಮಿಕ ಪ್ರವಚನದ ಉದ್ಘಾಟನಾ ಸಮಾರಂಭವನ್ನು ಇಂದು ಬುಧವಾರ ಸಾಯಂಕಾಲ 6.ಗಂಟೆಗೆ ಶ್ರೀ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ನಡೆಯಲಿದೆ. ದಿವ್ಯ ಸಾನಿಧ್ಯ ಹುಲಸೂರಿನ ಶ್ರೀ ಗುರು ಬಸವೇಶ್ವರ ಸಂಸ್ಥಾನ ಮಠದ ಪೂಜ್ಯ ಶ್ರೀ ಶಿವಾನಂದ ಮಹಾಸ್ವಾಮಿ. ದಿವ್ಯ ನೇತೃತ್ವ ಜೇವರ್ಗಿ ಚಿರಗಳ್ಳಿಯ ಶ್ರೀ ಜಗದ್ಗುರು ಮರಳಶಂಕರ ದೇವರ ಗುರು ಪೀಠದ ಪೂಜ್ಯಶ್ರೀ ಸಿದ್ದಬಸವ ಕಬೀರ್ ಸ್ವಾಮಿಗಳು. ಹಾಗೂ ಹರಳಯ್ಯಗವಿಯ ಪೂಜ್ಯ ಶ್ರೀ ಡಾ ಗಂಗಾಂಬಿಕಾ ಅಕ್ಕ. ಉಪವಿಭಾಗ ಸಹಾಯಕ ಆಯುಕ್ತರಾದ ಪ್ರಕಾಶ ಕುದರೆ ಉದ್ಘಾಟಿಸಲಿದ್ದಾರೆ. ಗೌರವ ಉಪಸ್ಥಿತಿ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯ ಅಧ್ಯಕ್ಷರಾದ ಅನೀಲಕುಮಾರ ರಗಟೆ ಅಧ್ಯಕ್ಷತೆ ವಹಿಸಲಿದ್ದಾರೆ. ಗೌರವ ಉಪಸ್ಥಿತಿ ಶ್ರೀ ಬಸವೇಶ್ವರ ದೇವಸ್ಥಾನ ವಿಶ್ವಸ್ಥ ಸಮಿತಿಯ ಅಧ್ಯಕ್ಷರಾದ ಶಶಿಕಾಂತ ದುರ್ಗೆ. ನಿರ್ದೇಶಕರಾದ ಇರಣ್ಣಾ ಹಲಶೆಟ್ಟೆ. ಬಸವರಾಜ ತೊಂಡಾರೆ. ಸ್ವಾಗತ ಸಹ ಕಾರ್ಯದರ್ಶಿ ಬಸವರಾಜ ಬಾಲಕಿಲೆ. ವಚನ ಸಂಗೀತ ಹಾರ್ಮೋನಿಯಂ ವಾದಕರು ರಂಜನಾ ಭೂಶಟೆ. ತಬಲವಾದಕರು ಮಂಜುನಾಥ ಹೇಮಶಟೆ . ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯ ವತಿಯಿಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಸವಕಲ್ಯಾಣ :- ತಾಲೂಕಿನ ಖಾನಾಪುರ ಬಿ. ಗ್ರಾಮದಲ್ಲಿ ಶ್ರೀ ಮಹಾದೇವ ಜಾತ್ರಾ ಮಹೋತ್ಸವ ನಿಮಿತ್ಯ ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಮಂಗಳವಾರ ರಥಕ್ಕೆ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಲ್ಲಿನಾಥ ಹಿರೇಮಠ ಹಾರಕೂಡ, ಮಹಾದೇವಪ್ಪ ಪಾಟೀಲ, ಸಂಗಯ್ಯ ಸ್ವಾಮಿ ಇತರರು ಉಪಸ್ಥಿತರಿದ್ದರು.(ಮಲ್ಲಮ್ಮ ನುಡಿ ಚಿತ್ರ).

## ಕೇಂದ್ರ ಸರ್ಕಾರ ಪಿಂಚಣಿದಾರರ ಕಾನೂನು ಕೈಬಿಡಲು ಒತ್ತಾಯ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಕೇಂದ್ರಸರ್ಕಾರ ಪಿಂಚಣಿದಾರರನ್ನು ವರ್ಗಿಕರಿಸಲು ಮತ್ತು ಪಿಂಚಣಿದಾರರ ನಡುವೆ ವ್ಯತ್ಯಾಸ ಕಾಯ್ದುಕೊಳ್ಳಲು ಅಧಿಕಾರಿ ಹೊಂದಿರುವ ಮಾರ್ಚ 2025 ರ ಕಾಯ್ದೆಯನ್ನು ಅನುರ್ಜಿತಗೊಳಿಸುವಂತೆ ಒತ್ತಾಯಿಸಿ ಸೋಮವಾರ ಕರ್ನಾಟಕ ರಾಜ್ಯ ಸಕರಾಕರಿ ನಿವೃತ್ತ ನೌಕರರು ಪ್ರತಿಭಟನೆ ನಡೆಸಿ ತಹಸೀಲ್ದಾರ ಮೂಲಕ ಪ್ರಧಾನಮಂತ್ರಿಗಳಿಗೆ ಬರೆದ ಮನವಿ ಪತ್ರ ಸಲ್ಲಿಸಿದರು. ಸಂಘದ ತಾಲೂಕು ಅಧ್ಯಕ್ಷ ಬಸವರಾಜ ಮರೆ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ನಿವೃತ್ತ ನೌಕರರು, ಯಾವುದೇ ಪೂರ್ವ ಸೂಚನೆ ನೀಡಿದೆ ಹಣಕಾಸು ಮಸೂದೆಯ ಭಾಗವಾಗಿ ಪರಿಚಯಿಸಲಾದ ಈ ಕಾನೂನು, ಜೀವನದ ಕೊನೆಯ ಕ್ಷಣಗಳಲ್ಲಿ ಕಾಲ ಕಳೆಯುತ್ತಿರುವ ನಿವೃತ್ತ ನೌಕರರಿಗೆ ತುಂಬಾ ಅನ್ಯಾಯವಾಗಿದೆ. ತಕ್ಷಣವೇ ಇಂತಹ ಕಠಿಣ ಕಾನೂನು ಹಿಂಪಡೆದು ಎಲ್ಲಾ ನಿವೃತ್ತ ನೌಕರರಿಗೆ ಅನುಕೂಲ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿ ಮಲ್ಲಿಕಾರ್ಜುನ ಬಿರಾದಾರ, ಉಪಾಧ್ಯಕ್ಷರಾದ ಶಾಂತವೀರ ಪಾಟೀಲ, ಶಿವಾನಂದ ಗುಂದಗಿ, ಖಚಾಂಚಿ ಅಶೋಕ ಕಾರಬಾರಿ, ಮುಂಖಡರಾದ ಬಸವರಾಜ ಅಂಬರಶೆಟ್ಟಿ, ಜೈರಾಜ ಬಿರಾದಾರ, ಭಾವುರಾವ ನೆಲವಾಡೆ, ಶ್ರೀಮಂತ ಪಾಟೀಲ, ಶಂಕರರಾವ ಚಲವಾ, ರೇಖಾಬಾಯಿ ಮಹಾಜನ, ನಾಗಭೂಷಣ ಮಾಮಡಿ, ಮಲ್ಲಿಕಾರ್ಜುನ ಹಲಮಂಡಗೆ, ಪುಂಡಲೀಕರಾವ ಟೆಳೆಕರ, ಬಾಬುರಾವ ಬಿಚಕುಂದೆ, ರಾಜಣ್ಣಾ ಶೇರಿಕಾರ, ಜಿ.ಆರ್.ವಾಲಿ, ಶಂಕರೆಪ್ಪ ಮಾಶೆಟ್ಟೆ, ಮಲ್ಲಮ್ಮಾ ಆರ್ ಪಾಟೀಲ, ರಾಮಚಂದ್ರ ಬಡಿಗೇರ, ಕಲ್ಲಮ್ಮ ರಾಮಲಿಂಗ ಸ್ವಾಮಿ, ದಿಗಂಬರಾವ ಐನಾಪೂರೆ, ಕುಶಾಲರಾವ ವರದಾ, ಜಿ.ಆರ್. ಚಿಂಚೋಳೆ, ವಿಶ್ವನಾಥ ಕುಂಬಾರ, ನರಸಿಂಗರಾವ ತುಕದೆ, ಬಂಡೆಪ್ಪ ಶರಣರು, ವೈಜಿನಾಥ ಕೋಡಗೆ, ಮಲ್ಲಿಕಾರ್ಜುನ ಬಿರಾದಾರ ಮೆಹಕರ, ಭದ್ರಪ್ಪ ಕೆಪಿಸಿ, ನೀಲಕಂಠ ಚಾಪೆ, ಕೃಷ್ಣಾಜಿರಾವ ದ್ವಾರಪಾಲಕ, ಜಗನ್ನಾಥ ಕನ್ನಾಳೆ, ಚಂದ್ರಕಾಂತ ಹುಲಸೂರೆ, ಶಿವಾಜಿರಾವ ಸೂರ್ಯವಂಶಿ, ಶಿವರಾಜ ಜೊತೆಪ್ಪ, ಸುಭಾಷಬಾಬು ಹಾಲಕುಡೆ, ಸಿದ್ದಲಿಂಗಯ್ಯಾಸ್ವಾಮಿ, ಬಾಜಿರಾವ ಮೇತ್ರೆ ಸೇರಿದಂತೆ ಹಲವರು ಇದ್ದರು.

## ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



# ಜಾತಿ ರಾಜಕಾರಣ ದೇಶದ ಅಭಿವೃದ್ಧಿಗೆ ಹಿನ್ನಡೆ

ಭಾರತದಂತಹ ವೈವಿಧ್ಯಮಯ ದೇಶದಲ್ಲಿ ಜಾತಿ ವ್ಯವಸ್ಥೆ ಸಾಮಾಜಿಕ ವಾಸ್ತವಿಕತೆಯಾಗಿ ಇನ್ನೂ ಉಳಿದಿದೆ. ಆದರೆ ಜಾತಿಯನ್ನು ರಾಜಕೀಯದ ಸಾಧನವಾಗಿ ಬಳಸುವುದು ದೇಶದ ಅಭಿವೃದ್ಧಿಗೆ ದೊಡ್ಡ ಅಡ್ಡಿಯಾಗುತ್ತಿದೆ. ಜನರ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಬದಲು ಕೆಲ ರಾಜಕೀಯ ನಾಯಕರು ಜಾತಿ ಭಾವನೆಗಳನ್ನು ಪ್ರಚೋದಿಸಿ ಮತಗಳನ್ನು ಪಡೆಯಲು ಪ್ರಯತ್ನಿಸುತ್ತಾರೆ. ಇದರಿಂದ ಸಮಾಜದಲ್ಲಿ ವಿಭಜನೆ ಹೆಚ್ಚುತ್ತದೆ.

ಜಾತಿ ಆಧಾರಿತ ರಾಜಕಾರಣದಿಂದ ಜನರಲ್ಲಿ ಏಕತೆ ಕುಗ್ಗುತ್ತದೆ. ಅಭಿವೃದ್ಧಿ, ಶಿಕ್ಷಣ, ಉದ್ಯೋಗ, ಮೂಲಸೌಕರ್ಯಗಳಂತಹ ಪ್ರಮುಖ ವಿಷಯಗಳ ಬಗ್ಗೆ ಚರ್ಚೆ ನಡೆಯಬೇಕಾದ ಸಂದರ್ಭದಲ್ಲಿ ಜಾತಿ ವಿಚಾರಗಳೇ ರಾಜಕೀಯದಲ್ಲಿ ಮೇಲುಗೈ ಸಾಧಿಸುತ್ತವೆ. ಇದರಿಂದ ನಿಜವಾದ ಅಭಿವೃದ್ಧಿ ಕಾರ್ಯಗಳು ಹಿಂದೆ ಬೀಳುತ್ತವೆ.

ಜಾತಿ ರಾಜಕಾರಣ ಸಮಾಜದಲ್ಲಿ ಅಸಮಾನತೆ ಹಾಗೂ ದ್ವೇಷದ ವಾತಾವರಣವನ್ನು ಕೂಡ ಸೃಷ್ಟಿಸುತ್ತದೆ. ಜನರು ತಮ್ಮನ್ನು ಒಂದು ದೇಶದ ನಾಗರಿಕರಾಗಿ ನೋಡದೆ, ಜಾತಿಯ ಆಧಾರದ ಮೇಲೆ ವಿಭಜಿತರಾಗುತ್ತಾರೆ. ಇದು ಪ್ರಜಾಪ್ರಭುತ್ವದ ಮೂಲ ಮೌಲ್ಯಗಳಿಗೆ ವಿರೋಧವಾಗಿದೆ.

ದೇಶದ ಸಮಗ್ರ ಅಭಿವೃದ್ಧಿಗಾಗಿ ಜಾತಿ ರಾಜಕಾರಣದಿಂದ ದೂರ ಹೋಗುವುದು ಅಗತ್ಯ. ಜನಪ್ರತಿನಿಧಿಗಳು ಜಾತಿ ರಾಜಕಾರಣದ ಬದಲು ಅಭಿವೃದ್ಧಿ ರಾಜಕಾರಣವನ್ನು ಮುಂದಿಟ್ಟುಕೊಂಡು ಕೆಲಸ ಮಾಡಿದರೆ ಮಾತ್ರ ದೇಶದ ಪ್ರಗತಿ ಸಾಧ್ಯವಾಗುತ್ತದೆ. ಜನರೂ ಕೂಡ ಜಾತಿಯ ಆಧಾರದ ಮೇಲೆ ಮತ ಹಾಕುವ ಬದಲು ಅಭಿವೃದ್ಧಿ ಮಾಡುವ ನಾಯಕರನ್ನು ಆಯ್ಕೆ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು.

ಒಟ್ಟಿನಲ್ಲಿ, ಜಾತಿ ರಾಜಕಾರಣ ಕಡಿಮೆಯಾಗಿದಾಗ ಮಾತ್ರ ದೇಶದಲ್ಲಿ ನಿಜವಾದ ಸಮಾನತೆ ಮತ್ತು ಅಭಿವೃದ್ಧಿ ಸಾಧ್ಯವಾಗುತ್ತದೆ.



ಭಾಲ್ಕಿ : ಶ್ರೀ ಡೋಣೇಶ್ವರ ಮಹಾಪೂಜಾ ಮಹೋತ್ಸವ ಮತ್ತು ವಿಶ್ವಶಾಂತಿಗಾಗಿ 44ನೇ ವರ್ಷದ ಜಪಯಜ್ಞ ಹಾಗೂ ಪ್ರಯೋಗಾತ್ಮಕ ಧರ್ಮ ಶಿಕ್ಷಣ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪ್ರಕಾಶ್ ಖಂಡ್ರೆ ಅವರು ಭಾಗವಹಿಸಿದರು. ಈ ಸಂದರ್ಭದಲ್ಲಿ ದಿವ್ಯ ಸಾನಿಧ್ಯವಹಿಸಿದ ಪೂಜ್ಯಶ್ರೀ ಷ.ಬ್ರ. ರಾಜೇಶ್ವರ ಶಿವಾಚಾರ್ಯರು ಹಿರೇಮಠ ಮೇಹಕರ, ಡೋಣಗಾಪೂರ, ಗುರುಕುಲಾಶ್ರಮ ತಡೋಳಾ ಹಾಗೂ ಪೂಜ್ಯ ಶ್ರೀ ಷ.ಬ್ರ. ಡಾ ಹಾವಗಿಲಿಂಗೇಶ್ವರ ಶಿವಾಚಾರ್ಯರು ಶಿವಣಿ-ಹಲಬರ್ಗಾ-ಹೈದ್ರಾಬಾದ ಮತ್ತು ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

## ಶಿವಕುಮಾರ ಸ್ವಾಮೀಜಿ ಜಯಂತಿ ಆಚರಣೆಗೆ ಮನವಿ

• ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ



ತುಮಕೂರಿನ ಸಿದ್ಧಗಂಗಾ ಮಠದ ಲಿಂ.

ಶಿವಕುಮಾರ ಸ್ವಾಮೀಜಿಯ 119ನೇ ಜಯಂತಿಯನ್ನು ಜಿಲ್ಲೆಯಲ್ಲಿರುವ ಅವರ ಭಕ್ತವೃಂದದವರು ಮತ್ತು ಹಳೇ ವಿದ್ಯಾರ್ಥಿಗಳು ತಪ್ಪದೇ ಆಚರಿಸಬೇಕು ಎಂದು ಶ್ರೀ ಸಿದ್ಧಗಂಗಾ ಹಳೇ ವಿದ್ಯಾರ್ಥಿಗಳ ಹಾಗೂ ಹಿತೈಷಿಗಳ ಸಂಘದ ಜಿಲ್ಲಾಧ್ಯಕ್ಷ ಶಿವಕುಮಾರ ಪಾಟೀಲ ತೇಗಂಪೂರ ಮನವಿ ಮಾಡಿದ್ದಾರೆ.

ಶಿವಕುಮಾರ ಸ್ವಾಮೀಜಿ ಅವರು ಬಸವಾದಿ ಪ್ರಮಥರ ಕಾಯಕ, ದಾಸೋಹ ಸಿದ್ಧಾಂತವನ್ನು ಜೀವಂತಗೆಣಟಿಜಜಜಿಟಿಜಜಳಿಸಿ ಎಲ್ಲರ ಮನೆ, ಮನಸ್ಸಿನಲ್ಲಿ ನೆಲೆ ನಿಲ್ಲುವಂತೆ ಮಾಡಿದ್ದಾರೆ.

ಪ್ರತಿದಿನ ಹತ್ತು ಸಾವಿರ ಮಕ್ಕಳಿಗೆ ಪ್ರಸಾದ, ಶಿಕ್ಷಣ, ಆಶ್ರಯ ನೀಡಿದ ಮಹಾನ್ ಚೇತನ ಅವರಾಗಿದ್ದಾರೆ.

ಹಾಗಾಗಿ, ಅವರ ಜಯಂತೋತ್ಸವ ದಂದು ಭಕ್ತರು, ಅಭಿಮಾನಿಗಳು ಮನೆಗಳಲ್ಲಿ ಶ್ರೀಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪೂಜ್ಯರ ಹೆಸರಿನಲ್ಲಿ ಕೈಲಾದಷ್ಟು ದಾಸೋಹವನ್ನು ಮಾಡುವ ಮೂಲಕ ಜನ್ಮದಿನ ಆಚರಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪೂರ್ವಭಾವಿ ಸಭೆ

ರಾಯಚೂರು: ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯ ಪೂರ್ವಭಾವಿ ಸಿದ್ಧತಾ ಸಭೆಯು ಏಪ್ರಿಲ್ 1ರ ಸಂಜೆ ಸಂಜೆ 4 ಗಂಟೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆಯಲಿದೆ. ಸಂಬಂಧಿಸಿದ ಅಧಿಕಾರಿಗಳು ಮತ್ತು ಸಂಘ-ಸಂಸ್ಥೆಗಳ ಮುಖಂಡರು ಸಭೆಗೆ ಹಾಜರಾಗಿ ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಂಬೇಡ್ಕರ್ ಹಬ್ಬ 2026 ಜಿಲ್ಲಾಧಿಕಾರಿಗಳಿಂದ ಪೋಸ್ಟರ್ ಬಿಡುಗಡೆ



• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ದಲಿತ ವಿದ್ಯಾರ್ಥಿ ಪರಿಷತ್ ಹಾಗೂ ಜಿಲ್ಲೆಯ ವಿವಿಧ ಪ್ರಗತಿಪರ ಸಂಘ ಸಂಸ್ಥೆಗಳ ನೇತೃತ್ವದಲ್ಲಿ ನಡೆಯಲಿರುವ ಬಾಬಾಸಾಹೇಬ್ ಅಂಬೇಡ್ಕರ್ ಅವರ 135 ನೇ ಜಯಂತ್ಯುತ್ಸವ ಪ್ರಯುಕ್ತ ನಾಲ್ಕು ದಿನಗಳ "ಅಂಬೇಡ್ಕರ್ ಹಬ್ಬ"ದ ಪೋಸ್ಟರ್ ಅನ್ನು ಇಂದು ವಿಜಯಪುರ ಜಿಲ್ಲಾಧಿಕಾರಿಗಳಾದ ಡಾ. ಆನಂದ.ಕೆ ರವರು ಬಿಡುಗಡೆಗೊಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪೋಸ್ಟರ್ ಬಿಡುಗಡೆ ಮಾಡಿದ ಜಿಲ್ಲಾಧಿಕಾರಿಗಳು, ನಾಲ್ಕು ದಿನಗಳ ಅಂಬೇಡ್ಕರ್ ಹಬ್ಬ ಯಶಸ್ವಿಯಾಗಲಿ ಎಂದು ಹಾರೈಸಿದರು.

ಈ ವೇಳೆ ವಿಜಯಪುರ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಹೇಶ್ ಪೋತದಾರ, ಸಹಾಯಕ ನಿರ್ದೇಶಕರಾದ ಬಿ. ಜೆ. ಇಂಡಿ,

ದಲಿತ ವಿದ್ಯಾರ್ಥಿ ಪರಿಷತ್ತಿನ ರಾಜ್ಯ ಸಂಚಾಲಕರಾದ ಬಾಲಾಜಿ ಕಾಂಬಳೆ, ಸಮುದಾಯದ ಮುಖಂಡರಾದ ಸಂಜು ಕಂಬಾಗಿ, ಅಶೋಕ್ ನಾಯ್ಕೋಡಿ, ದಿಲೀಪ್ ಪ್ರಭಾಕರ ಉಪಸ್ಥಿತರಿದ್ದರು.

# ಶ್ರೀ ನೀಲಕಂಠೇಶ್ವರ ರಥೋತ್ಸವ




• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಪಟ್ಟಣದ ಸೋಮವಾರ ಪೇಟೆ ಶ್ರೀ ನೀಲಕಂಠೇಶ್ವರ ರಥೋತ್ಸವ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಏಪ್ರಿಲ್ 2ರಂದು ಜರುಗುತ್ತವೆ ಎಂದು ದೇವಸ್ಥಾನ ಕಾರ್ಯದರ್ಶಿ ಡಾ! ವೀರಭದ್ರಪ್ಪ ಕೊಳ್ಳಿ ಮಂಗಳವಾರ ತಿಳಿಸಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಗುರುವಾರ ಬ್ರಾಹ್ಮಿ ಮುಹೂರ್ತದಲ್ಲಿ ಜರುಗಲಿರುವ ಶ್ರೀ ನೀಲಕಂಠೇಶ್ವರ ದೇವರಿಗೆ ಬಿಲ್ವಾರ್ಚನೆ, ರುದ್ರಭಿಷೇಕ, ಕ್ಷಿರಾಭಿಷೇಕ, ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಾಚರಣೆಗಳ ಜರುಗುತ್ತವೆ. ಕುಂಬಾರ ಪೇಟೆ ಶ್ರೀ ಬಸವೇಶ್ವರ ದೇವಸ್ಥಾನದಿಂದ ಪಲ್ಲಕ್ಕಿ, ಕಳಸ, ಕುಂಭ ಮೆರವಣಿಗೆ ವಿವಿಧ ವಾದ್ಯ ಮೇಳಗಳೊಂದಿಗೆ ಪಟ್ಟಣದ ಪ್ರಮುಖ ಬೀದಿ ಹಾಗೂ ಮಾರುಕಟ್ಟೆಯಲ್ಲಿ ಸಂಚರಿಸಿ ನೀಲಕಂಠೇಶ್ವರ ದೇವಸ್ಥಾನ ತಲುಪಲಾಗುತ್ತದೆ. ಗದಗ – ಬೆಟಗೇರಿ ಶ್ರೀ ಜಗದ್ಗುರು ನಾಲ್ವಡಿ ಪಟ್ಟದಾರ್ಯ ಮಹಾಸ್ವಾಮಿಗಳ ಕುರುಹಿನ ಶೆಟ್ಟಿ ಪೀಠಾಧಿಶ್ವರ ನೀಲಕಂಠ ಮಹಾಸ್ವಾಮಿ ದಿವ್ಯ ಸನಿಧ್ಯದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಗುರುವಾರ ಸಾಯಂಕಾಲ ಶ್ರೀ ನೀಲಕಂಠೇಶ್ವರ ರಥೋತ್ಸವ ಜರುಗುತ್ತವೆ. ಎ. 4ರಂದು ಸಾಯಂಕಾಲ ಉಚ್ಚಯ್ಯ ಜರುಗುತ್ತದೆ. ಪಟ್ಟಣ ಸೇರಿದಂತೆ ವಿವಿಧ ಗ್ರಾಮೀಣ ಭಾಗದ ಶ್ರೀ ನೀಲಕಂಠೇಶ್ವರ ದೇವರ ಜಾತ್ರಾ ಮಹೋತ್ಸವದಲ್ಲಿ ಸರ್ವ ಭಕ್ತಧಿಗಳು ಕಾರ್ಯಕ್ರಮದಲ್ಲಿ ಭಾಗವಸಬೇಕು ಎಂದು ಮನವಿ ಮಾಡಿಕೊಂಡರು.

ದೇವಸ್ಥಾನ ಕಮಿಟಿ ಉಪಾಧ್ಯಕ್ಷ ಶಂಕರಪ್ಪ ಕವಡಿಮಟ್ಟಿ, ಮುಖಂಡರು ರಚಪ್ಪ ಗಬ್ಬುರ್, ವೀರನಗೌಡ, ಆನಂದ, ಚೆನ್ನಪ್ಪ ಪ್ರಧಾನಿ, ಜೀವನ ರವಿ ಜೀಡಿ, ಕಲ್ಲಿನಾಥ ಸೇರಿದಂತೆ ಇತರರಿದ್ದರು.

# ಪಿಸ್ತಾಹೌಸ್ ಭದ್ರತಾ ಸಿಬ್ಬಂದಿ ಮೇಲೆ ಹಲ್ಲೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ನಗರದ ರೇಡಿಯೋ ಪಾರ್ಕ್ ಪ್ರದೇಶದ ಪಿಸ್ತಾಹೌಸ್ ಭದ್ರತಾ ಸಿಬ್ಬಂದಿ ಮೇಲೆ ಹಲ್ಲೆ ನಡೆದಿರುವ ಬಗ್ಗೆ ಕೌಲ್ ಬಜಾರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾ.28 ರಂದು ರಾತ್ರಿ 10 ವರೆ ಸಮಯದಲ್ಲಿ ಊಟದ ಪಾರ್ಸ್ ಲ್ ಹೇಳಿದ ವ್ಯಕ್ತಿ. ಹೊಟೇಲ್ ಸಿಬ್ಬಂದಿ ಅರ್ಧ ಗಂಟೆಯಾದರೂ ಪಾರ್ಸ್ ಲ್ ನೀಡದೇ ಇದ್ದುದಕ್ಕೆ ಕೋಪಗೊಂಡು ತಮ್ಮ ಸ್ನೇಹಿತರನ್ನು ಕರೆತಂದು ಹೊಟೇಲ್ ಸಿಬ್ಬಂದಿ ಮೇಲೆ ರೇಗಾಡಿದ್ದಾನೆ. ನಂತರ ಹಲವರ ಮೇಲೆ ಆರೋಪಿ ಸಗೀರ್ ಹಲ್ಲೆ ಮಾಡಿದ್ದಾನೆ. ಹೊಟೇಲ್ ಸಿಬ್ಬಂದಿಯೂ ಕೈ ಕೈ ಮಿಲಾಯೊಸಿದೆ. ಈ ವೇಳೆಗೆ ಜಗಳ ಬಿಡಿಸಲು ಬಂದ ಓರ್ವ ಭದ್ರತಾ ಸಿಬ್ಬಂದಿ ಮೇಲೆ ಹಲ್ಲೆ ನಡೆಸಲಾಗಿದೆ.

ಈ ಬಗ್ಗೆ ಕೌಲ್ ಬಜಾರ್ ಠಾಣೆಯಲ್ಲಿ ಭದ್ರತಾ ಸಿಬ್ಬಂದಿ ಸಗೀರ್ ಮತ್ತಿತರರ ಮೇಲೆ ಪ್ರಕರಣ ದಾಖಲಿಸಿದ್ದಾನೆ.

# ವೆಂಕಟರಮಣ ರಥೋತ್ಸವ, ದೋಣಿ ವಿಹಾರ

• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ



ಪಟ್ಟಣದ ದೊಡ್ಡ ದೇವರೆಂದೇ ಖ್ಯಾತಿಯಾದ ಶ್ರೀ ವೆಂಕಟರಮಣ ದೇವರ ರಥೋತ್ಸವ ಹಾಗೂ ಧಾರ್ಮಿಕ ಕಾರ್ಯಗಳು ಇಂದು ಏ.1ರಿಂದ 3 ದಿನಗಳವರೆಗೆ ನಡೆಯಲಿವೆ. ಇಂದು ಏ.1 ರಂದು ಸಣ್ಣ ರಥೋತ್ಸವ ನಡೆಯಲಿದೆ. ಏ.2 ರಂದು ದೊಡ್ಡ ರಥೋತ್ಸವವಿದ್ದು, ಸಾವಿರಾರು ಭಕ್ತರು ಆಗಮಿಸಲಿದ್ದಾರೆ.

ಶ್ರೀ ವೆಂಕಟರಮಣ ದೇವರ ರಥದ ಮನೆಯಿಂದ ಸಿದ್ಧಗೊಂಡ ರಥವು ದುರ್ಗಾದೇವಿ ದೇವಸ್ಥಾನದವರೆಗೆ ಆಗಮಿಸಿ ನಂತರ ತನ್ನ ಮೂಲಸ್ಥಾನಕ್ಕೆ ತೆರಳಲಿದೆ. ಎರಡು ದಿನಗಳ ರಥೋತ್ಸವ ನಡೆದ ನಂತರ ಏ.3 ರಂದು ಶ್ರೀ ವೆಂಕಟರಮಣ ದೇವರನ್ನು ಪಲ್ಲಕ್ಕಿಯ ಮೂಲಕ ಬೇಳಾಬಂದರಿಗೆ ತೆರಳಿ ಅಲ್ಲಿ ಬೋಟ್‌ನಲ್ಲಿ ಜಲಕ್ರೀಡೆಗೆ ತೆರಳಲಿದೆ.

ಜಲಕ್ರೀಡೆಯ ನಂತರ ಸುತ್ತಮುತ್ತಲಿನ ಜನರು ಅಲ್ಲಿಯೇ ದೇವರ ದರ್ಶನ ಮಾಡಿ ಧನ್ಯತೆ ಮೆರೆಯುತ್ತಾರೆ. ಹಾಗೇ ಇಲ್ಲಿಗೆ ಆಗಮಿಸಿದ ಎಲ್ಲರಿಗೆ ವೆಂಕಟ್ರಮಣ ಹೊನ್ನಪ್ಪ ನಾಯ್ಕ ಮೇತ್ರಿ ಮನೆ ಇವರು ಪ್ರತಿವರ್ಷ ಪಾನಕ ನೀಡುತ್ತಾರೆ. ದೇವರು ಬರುವ ಸಮಯದಲ್ಲಿ ತಳಿರು–ತೋರಣ ಕಟ್ಟಿ ಹಾಕಿ ರಂಗೋಲಿ ಬಿಡಿಸಿ ದೇವರಿಗೆ ಪೂಜೆ ಸಲ್ಲಿಸಿ ಧನ್ಯತೆ ಮೆರೆಯಲಾಗುತ್ತದೆ.

# ಸಂವಿಧಾನದಿಂದ ಸರ್ವರಿಗೂ ಅಸ್ತಿತ್ವ: ನಾಯ್ಕ್

• ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ



ಅಂಬೇಡ್ಕರ್ ಕೊಟ್ಟ ಸಂವಿಧಾನದಿಂದ ದೇಶದ ಪ್ರತಿಯೊಬ್ಬರೂ ತಮ್ಮ ಅಸ್ತಿತ್ವ ಕಾಯ್ದುಕೊಳ್ಳಲು ಸಾಧ್ಯವಾಯಿತು. ಇಲ್ಲದಿದ್ದರೆ ಬಲಾಢ್ಯ ಶಕ್ತಿಗಳ ಕೈಯಲ್ಲಿ ಬಡವರ ಬದುಕು ಬರ್ಬರವಾಗಿರುತ್ತಿತ್ತು ಎಂದು ಶಾಸಕ ನೇಮಿರಾಜ್ ಹೇಳಿದರು.

ಅವರು ಪಟ್ಟಣದ ತಾಲೂಕು ಪಂಚಾಯತ ಕಚೇರಿಯಲ್ಲಿ ಕರೆಯಲಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆ ಉದ್ದೇಶಿಸಿ ಮಾತನಾಡುತ್ತಿದ್ದರು.

ಮುಂದುವರಿದು ಮಾತನಾಡಿದ ಅವರು ಜಯಂತಿ ಸಂದರ್ಭದಲ್ಲಿ ಎಲ್ಲಾ ಸಮುದಾಯದ ಮುಖಂಡರುಗಳಿಗೆ ಅವಕಾಶ ಕೊಡಬೇಕು. ಇದರಿಂದ ಮನುಷ್ಯರಲ್ಲಿ ಸೌಹಾರ್ದ ಸಂಬಂಧಗಳು ಏರ್ಪಡುತ್ತವೆ ಎಂದರು.

ಪಟ್ಟಣದಲ್ಲಿ ಈ ಹಿಂದೆ ಇದ್ದ ಅಂಬೇಡ್ಕರ್ ವೃತ್ತವನ್ನು ಯಾರೂ ಕಬ್ಜ ಮಾಡಲು ಸಾಧ್ಯವಿಲ್ಲ.ಮತ್ತು ಈಗ ಗುರುತಿಸಿರುವ ಜಾಗದಲ್ಲೇ

ಅಂಬೇಡ್ಕರ್ ವೃತ್ತ ನಿರ್ಮಿಸಲಾಗುವುದು ಎಂದರು. ಮುಖ್ಯಾಧಿಕಾರಿ ಮುಗಳಿ ಹಾಗೂ ದಲಿತ ನಾಯಕರ ನಡುವೆ ಜಟಾಪಟಿ.( ಇದು ಬೋಲ್ಡ್)

ಹಳೆಯ ಅಂಬೇಡ್ಕರ್ ವೃತ್ತ ಹಾಗೂ ಫಾರಂ 3 ಕ್ಕೆ ಸಂಬಂಧಿಸಿದಂತೆ ಮುಖ್ಯಾಧಿಕಾರಿ ಹಾಗೂ ದಲಿತ ನಾಯಕರ ನಡುವೆ ಕೆಲಕಾಲ ಮಾತಿನ ಚಕಮಕಿ ನಡೆಯಿತು.ಶಾಸಕರು ಮಧ್ಯೆ ಪ್ರವೇಶಿಸಿ ಸಮಾಧನಗೊಳಿಸಿದರು.

**ಸಭೆಯ ನಿರ್ಣಯಗಳು ಬೋಲ್ಡ್**

ಅಂಬೇಡ್ಕರ್ ಜಯಂತಿ ದಿನದಂದು ಮೆರವಣಿಗೆಯ ಸಂದರ್ಭದಲ್ಲಿ ರಸ್ತೆಯುದ್ದಕ್ಕೂ ಪುರಸಭೆಯವರು ರಸ್ತೆಗೆ ನೀರು ಸಿಂಪಡಿಸಬೇಕು. ಕುಡಿಯುವ ನೀರಿನ ವ್ಯವಸ್ಥೆಯನ್ನು ರಡ್ಡಿ ಸಂಘದ ತಾಲೂಕು ಅಧ್ಯಕ್ಷ ಬಸವರಾಜ ರೆಡ್ಡಿ ಮಾಡಲು ಒಪ್ಪಿಕೊಂಡರು.

ನಾಡಗೀತೆ,ರೈತಗೀತೆ ಹಾಗೂ ಇನ್ನಿತರ ಹಾಡುಗಾರರನ್ನು ಕರೆಸಲು,ಹಾಗೂ ತಾಲೂಕಿನಲ್ಲಿ ಪಿಯು ಹಾಗೂ ಎಸ್.ಎಸ್.ಎಲ್.ಸಿ.ಯಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ಮೂವರು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಪ್ರಶಸ್ತಿ,ಹಾಗೂ ಸನ್ಮಾನ ಮಾಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವಹಿಸಲಾಯಿತು.ಡಿಎ□□□ಸ್

ನವರು ಡಿಜೆ ಗೆ ಅನುಮತಿ ಕೇಳಿದಾಗ ಶಾಸಕರು ಅದು ನಮ್ಮ ಸಂಸ್ಕೃತಿ ಅಲ್ಲ.ಪಟ್ಟಣದಲ್ಲಿ ನಡೆಯುವ ಯಾವುದೇ ಕಾರ್ಯಕ್ರಮದಲ್ಲಿ ಡಿಜೆಗಳನ್ನು ಬಳಸುವಂತಿಲ್ಲ ಎಂದು ಹೇಳಿದರು.

ಬದಲಾಗಿ, ಮೆರವಣಿಗೆ ಸಂದರ್ಭದಲ್ಲಿ ಅಂಬೇಡ್ಕರ್ ಭಾವಚಿತ್ರವನ್ನು ಬೆಳ್ಳಿರಥದಲ್ಲಿಟ್ಟು ತರಲು ನಿರ್ಣಯಿಸಲಾಯಿತು.

ಬಿರು ಬೇಸಿಗೆ ಇರುವ ಕಾರಣಕ್ಕಾಗಿ ಪ್ರಮುಖ ಸ್ಥಳಗಳಲ್ಲಿ ಮಜ್ಜಿಗೆ ವ್ಯವಸ್ಥೆ ಮಾಡಲು ತೀರ್ಮಾನಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ಇಲಾಖೆಯವರೇ ನಿರ್ವಹಿಸಲು ಒಪ್ಪಿಗೆ ಸೂಚಿಸಲಾಯಿತು.ಮಧ್ಯೆ ಮೋರಿಗೇರಿಯ ದಲಿತ ನಾಯಕ ಮಾತನಾಡಿ,ಅಂಬೇಡ್ಕರ್ ಬಗ್ಗೆ ತಾಲೂಕು ಅಧ್ಯಕ್ಷರಾದ ದೊಡ್ಡಬಸಪ್ಪ ಅವರೇ ಉಪನ್ಯಾಸ ಮಾಡಬೇಕು. ಏಕೆಂದರೆ, ಅವರು 1990 ರಿಂದ ಸಮುದಾಯದ ಚಟುವಟಿಕೆಗಳಲ್ಲಿ ಸಕ್ರೀಯರಿದ್ದು,ಅವರಿಗೆ ಸಂಪೂರ್ಣ ಜ್ಞಾನ ಇದೆ,ಎಂದು ಮಾತನಾಡಲು ಅವರಿಗೇ ವಹಿಸಲಾಯಿತು.ಇನ್ನೊಬ್ಬ ದಲಿತ ನಾಯಕ ಎ.ಮಹೇಶ್ ಮಾತನಾಡಿ, ತಾಲ್ಲೂಕಿನ ಹಲವು ಹಳ್ಳಿಗಳಲ್ಲಿ ಅಂಬೇಡ್ಕರ್ ಭವನಗಳು ಅರ್ಧಂಬರ್ಧವಾಗಿದ್ದು ಅವುಗಳನ್ನು ಪೂರ್ಣಗೊಳಿಸಿಕೊಡಬೇಕು

ಎಂದರು.ಒಟ್ಟಾರೆ ಈ ಸಲದ ಅಂಬೇಡ್ಕರ್ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಯಿತು.

ವೇದಿಕೆಯಲ್ಲಿ ಪ್ರಭಾರಿ ತಹಶಿಲ್ದಾರ ಶಿವಕುಮಾರ್ ಗೌಡ,ಸಮಾಜ ಕಲ್ಯಾಣ ಇಲಾಖೆಯ ಜಗದೀಶ್ ಇದ್ದರು. ಕಾರ್ಯಕ್ರಮದ ನಡಾವಳಿಗಳನ್ನು ಸಮಾಜ ಕಲ್ಯಾಣ ಇಲಾಖೆಯ ಅಧೀಕ್ಷಕಿ ಶೋಭಾ ಓದಿದರು.

ಕಾರ್ಯಕ್ರಮದ ಸ್ವಾಗತ ಹಾಗೂ ವಂದನಾರ್ಪಣೆಯನ್ನು ಹಿರಿಯ ನಿಲಯ ಪಾಲಕ ನಾಗರಾಜ್ ನಿರ್ವಹಿಸಿದರು.

ಈ ಸಂದರ್ಭದಲ್ಲಿ ಅಂಬೇಡ್ಕರ್ ಸಂಘದ ಅಧ್ಯಕ್ಷರಾದ ದೊಡ್ಡಬಸಪ್ಪ ಗದ್ದಿಕೇರಿ.ಯಡ್ರಾಮ್ನೆಹಳ್ಳಿ ಮರಿಯಪ್ಪ. ಚಲುಗೋಡು ಮೈಲಪ್ಪ. ಕೇಚಿನಬಂಡಿ ದುರ್ಗಪ್ಪ. ಮೋರಿಗೇರಿ ಮೈಲಪ್ಪ. ಕಿತ್ನೂರ್ ದುರ್ಗಪ್ಪ. ಬಾಬು ಜಗಜೀವನ್ ರಾಮ್ ಸಂಘದ ಅಧ್ಯಕ್ಷರು ಅಡವಿ ಆನಂದವನಹಳ್ಳಿ ಪ್ರಭಾಕರ್.

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ತಾಲೂಕು ಸಂಚಾಲಕರು ಮಹೇಶ್.ಎ.ಕೊರ್ಲಹಳ್ಳಿ ಶಿವಕುಮಾರ್. ಭರ್ಮಪ್ಪ. ಅಲ್ಲೂರು ಗಣೇಶ್. ಅರೆಗೊಂಡನಹಳ್ಳಿ ದುರ್ಗಪ್ಪ. ದಶಮಾಪುರ ಬಸವರಾಜ್. ಉಮೇಶ್ ಮೇಘರಾಜ್. ಕೆಂಚಪ್ಪ. ಮೈಲಾರಪ್ಪ. ರಮೇಶ್. ನಾಗರಾಜ್. ರಮೇಶ್.

ಅಂಬಳಿ ದೇವೇಂದ್ರಪ್ಪ. ಉಪ್ಪಾರ್ ಹುಚ್ಚಪ್ಪ. ಲೋಕಪ್ಪ. ಅರ್ಜುನ. ಚಲವಾದಿ ಸಮಾಜದ ಮುಖಂಡರಾದ ಕಾಳಿ ಬಸವರಾಜ ಮತ್ತು ಹುಲುಗಪ್ಪ. ಮತ್ತು ಎಲ್ಲಾ ಸಮುದಾಯ ಮುಖಂಡರು ಭಾಗವಹಿಸಿ ಪೂರ್ವಸಭೆಯನ್ನು ಯಶಸ್ವಿಗೊಳಿಸಲಾಯಿತು.

# ಬೇಸಿಗೆ: ಮಕ್ಕಳ ಬಗ್ಗೆ ಪೋಷಕರೇ ಎಚ್ಚರ ವಹಿಸಿ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಸಂಸ್ಥೆಯ ರಾಘವೇಂದ್ರ ಬೇಸಿಗೆ ರಜೆ ಆರಂಭ ಪೋಷಕರೇ ಚಿಕ್ಕ ಮಕ್ಕಳ ಬಗ್ಗೆ ಜಾಗರೂಕರಾಗಿರಿ: ಮಕ್ಕಳನ್ನು ಕೆರೆ –ಕಟ್ಟೆಗಳು ಕೃಷಿ ಹೊಂಡಗಳು ಬಳಿ ಬಿಡಬೇಡಿ.ಸಂಸ್ಥೆ ಮುಖ್ಯಸ್ಥ ರಾಘವೇಂದ್ರ ವೀರೇಶ್ ಹೊಸಳ್ಳಿ ಸಿಂಧನೂರು: ಬೇಸಿಗೆ ರಜೆ ಆರಂಭವಾಗಿದೆ ಬಿಸಿಲ ತಾಪ ಏರುತ್ತಿರುವ ಬೆನ್ನಲ್ಲೇ ಮಕ್ಕಳ ಆಟ ಆಡುವ ನೆಪದಲ್ಲಿ ತಂಪು (ಪಾನೀಯ) ಪಡೆಯಬೇಕು ಎನ್ನುವ ಹಂಬಲದೊಂದಿಗೆ ನೀರಿನಲ್ಲಿ ಈಜಲು ಹೋಗುವ ಸಾಧ್ಯತೆಗಳು



# ಸಹಕಾರ ಸಂಘಗಳ ಸಮೀಕ್ಷೆಗೆ ರಾಷ್ಟ್ರೀಯ ಸಾಂಖ್ಯಿಕ ಕಾರ್ಯಾಲಯ ಸಜ್ಜು

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಿಖರವಾದ ಅಂಕಿ–ಅಂಶಗಳನ್ನು ಸಂಗ್ರಹಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಸಾಂಖ್ಯಿಕ ಕಾರ್ಯಾಲಯವು ಸಹಕಾರ ಸಂಘಗಳ ಸಮೀಕ್ಷೆಯನ್ನು ಕೈಗೆತ್ತಿಕೊಳ್ಳುತ್ತಿದ್ದು, ಈ ಸಮೀಕ್ಷೆಯು ಅತ್ಯಂತ ಮಹತ್ವದ್ದಾಗಿದೆ ಎಂದು ಬೆಳಗಾವಿ ವಿಭಾಗದ ಸಹಕಾರ ಸಂಘಗಳ ಜಂಟಿ ನಿಬಂಧಕ ಕಲಪ್ಪ ಒಬಣ್ಣಗೋಳ ಅವರು ತಿಳಿಸಿದರು.

ಹುಬ್ಬಳ್ಳಿ ನಗರದ ರಾಷ್ಟ್ರೀಯ ಸಾಂಖ್ಯಿಕ ಕಾರ್ಯಾಲಯದ ಸಭಾ ಭವನದಲ್ಲಿ ಸೋಮವಾರ ಆಯೋಜಿಸಲಾಗಿದ್ದ ‘ಸಹಕಾರ ಸಂಘಗಳ

ತ್ವರಿತ ಸಮೀಕ್ಷೆ’ಯ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.ದೇಶದ ಆರ್ಥಿಕ ಪ್ರಗತಿ ಮತ್ತು ಉದ್ಯೋಗ ಸೃಷ್ಟಿಯಲ್ಲಿ ಸಹಕಾರ ಸಂಘಗಳ ಪಾತ್ರವೇನು ಎಂಬುದನ್ನು ತಿಳಿಯಲು ಈ ಸಮೀಕ್ಷೆ ಸಹಕಾರಿಯಾಗಲಿದೆ. ಈ ಸಮೀಕ್ಷೆಗೆ ಸಹಕಾರ ಇಲಾಖೆಯು ಸಂಪೂರ್ಣ ಸಹಕಾರ ನೀಡಲಿದೆ ಎಂದರು.

ಕಾರ್ಯಾಲಯದ ನಿರ್ದೇಶಕ ಹರೀಶ್ವರನ್ ಅವರು ಮಾತನಾಡಿ, ಸಹಕಾರ ಸಂಘಗಳ ಕುರಿತಾದ ಸಮೀಕ್ಷೆಯು ಇದೇ ಮೊದಲ ಬಾರಿಗೆ ನಡೆ–ಯುತ್ತಿದೆ. ಈ ವೇಳೆ ಸಂಘಗಳ ಒಟ್ಟು ಮೌಲ್ಯ ವರ್ಧನೆ, ಒಟ್ಟು ಉತ್ಪಾದನಾ ಮೌಲ್ಯ ಹಾಗೂ ಉದ್ಯೋಗದ ಕುರಿತಾದ ಸಮಗ್ರ ಮಾಹಿತಿಯನ್ನು ಸಂಗ್ರಹಿಸಲಾಗುವುದು ಎಂದರು.

ಕೇಂದ್ರ ಸಹಕಾರ ಸಚಿವಾಲಯದ ಕೋರಿಕೆ–ಯಂತೆ ಈ ಸಮೀಕ್ಷೆ ನಡೆಯುತ್ತಿದ್ದು, ಏಪ್ರಿಲ್ 1 ರಿಂದ ಆರಂಭಗೊಂಡು ಮುಂಬರುವ ಸೆಪ್ಟೆಂಬರ್ ವೇಳೆಗೆ ಪೂರ್ಣಗೊಳ್ಳಲಿದೆ ಎಂದರು.

ಈ ತರಬೇತಿ ಶಿಬಿರದಲ್ಲಿ ಬೆಳಗಾವಿ ಉಪ ಪ್ರಾದೇಶಿಕ ಕಾರ್ಯಾಲಯದ ಸಹಾಯಕ ನಿರ್ದೇಶಕ ಮೋಹನ ಕಾಜೋರ್ಳ ಸೇರಿದಂತೆ ಹುಬ್ಬಳ್ಳಿ, ಬೆಳಗಾವಿ, ಬಳ್ಳಾರಿ ಹಾಗೂ ಕಲಬುರಗಿ ಕಾರ್ಯಾಲಯಗಳ ಹಿರಿಯ ತಾಂತ್ರಿಕ ಅಧಿಕಾರಿಗಳು ಉಪಸ್ಥಿತರಿದ್ದರು.

ಸಹಾಯಕ ನಿರ್ದೇಶಕ ಪ್ರಮೋದ ಪಂಡಿತ ಅವರು ಸ್ವಾಗತಿಸಿದರು. ಉಪನಿರ್ದೇಶಕ ಮಹದೇವಪ್ಪ ವಂದಿಸಿದರು.

# ಶರಣ ಗಣದ ಸಮ್ಮುಖದಲ್ಲಿ ಅಕ್ಕನ ಜಯಂತ್ಯುತ್ಸವ, ವಚನ ವಿಜಯೋತ್ಸವ: ಪ್ರಭುದೇವ ಮಹಾಸ್ವಾಮೀಜಿ

ಮಲ್ಲಮ್ಮ ನುಡಿ ವಾರ್ತೆ ಗೋರಟಾ ಬಿ



ಲಿಂಗಾಯತ ಮಹಾಮಠದ ವಾರ್ಷಿಕ ಕಾರ್ಯಕ್ರಮವಾಗಿ, ಪ್ರತಿ ವರ್ಷದಂತೆ ದಿನಾಂಕ 2 ಮತ್ತು 3 ಏಪ್ರಿಲ್ 2026ರಂದು ಎರಡು ದಿನ ’ಜಗನ್ಮಾತೆ ಅಕ್ಕಮಹಾದೇವಿ ಜಯಂತ್ಯುತ್ಸವ ಹಾಗೂ ವಚನ ವಿಜಯೋತ್ಸವವನ್ನು’ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ ಎಂದು ಪೂಜ್ಯರು ತಿಳಿಸಿದರು.12ನೇ ಶತಮಾನದ ಮಹಾದೇವಿಯಕ್ಕ ವಿಶ್ವದ ಮೊದಲ ಕವಿಯತ್ರಿ. ಅನುಭವ ಮಂಟಪದ ಮಾಣಿಕ್ಯ, ಸ್ತ್ರೀ ಕುಲದ ಅನರ್ಘ್ಯ ರತ್ನ. ಅಕ್ಕನ ಜೀವನ ಮತ್ತು ಸಂದೇಶಗಳು ಮಾನವ ಕುಲಕ್ಕೆ ಮಾರ್ಗದರ್ಶಿ. ಮಹಾದೇವಿ ಅಕ್ಕನ ವಚನಗಳು ಮತ್ತು ಯೋಗಾಂಗ ತ್ರಿವಿಧಿಗಳು ಅನುಭವದ ರಸಗಟ್ಟಿಯಾಗಿದ್ದು, ಅಧ್ಯಾತ್ಮಸಾಧನೆಗೆ ಪಥದರ್ಶಿಯಾಗಿವೆ. ಕಾರಣ ಅಕ್ಕನ ಜಯಂತ್ಯುತ್ಸವ ಮೂಲಕ ಬಸವಾದಿ ಶರಣರ ಮಾನವೀಯ ಮೌಲ್ಯಗಳನ್ನು ಜನಮನದಲ್ಲಿ ಬಿತ್ತಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ವಿವರ:

ಕಾರ್ಯಕ್ರಮದ ನಿಮಿತ್ಯ ಈಗಾಗಲೇ 25/03/2026 ರಿಂದ 01/04/2026ರ ವರೆಗೆ ಎಂಟು ದಿನಗಳ ಕಾಲ ಅಕ್ಕನ ದರ್ಶನ ಪ್ರವಚನ ಜರುಗುತ್ತಿದೆ. ಕಾರ್ಯಕ್ರಮಕ್ಕೆ ಬೇಕಾದ ಸಕಲ ಸಿದ್ಧತೆಗಳು ಈಗಾಗಲೇ ಪೂರ್ಣಗೊಂಡಿವೆ. ಶ್ರೀಮಠದ ಸದ್ಭಕ್ತ ಮಂಡಳಿಯವರು, ಲಿಂಗಾಯತ ಸೇವಾದಳ ಮತ್ತು ನೀಲಮ್ಮನ ಬಳಗದವರು ಕಾರ್ಯಕ್ರಮದ ಯಶಸ್ವಿಗಾಗಿ ಹಗಲಿರುಳು ದುಡಿಯುತ್ತಿದ್ದಾರೆ. ಎಂಬುದಾಗಿ ಹರುಷಪಟ್ಟು ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

ಮೊದಲ ದಿನ 02/04/2026ರಂದು ಸಂಜೆ 6 ಗಂಟೆಗೆ ನೀಲಮ್ಮನ ಬಳಗದವರು ಅಕ್ಕನ ತೊಟ್ಟಿಲು ವಿಶೇಷವಾಗಿ ನೆರವೇರಿಸುವವರು.

ನಂತರ ವಿಶೇಷ ಉಪನ್ಯಾಸ ಕಾರ್ಯಕ್ರಮ ಸಾನಿಧ್ಯ : ಪೂಜ್ಯಶ್ರೀ ಮ.ನಿ.ಪ್ರ ಪ್ರಭುದೇವ ಮಹಾಸ್ವಾಮೀಜಿ ಲಿಂಗಾಯತ ಮಹಾಮಠ ಗೋರ್ಟಾ(ಬಿ) ಮತ್ತು ಬಸವಗಿರಿ ಬೀದರ, ಪೂಜ್ಯಶ್ರೀ ಶಿವಾನಂದ ಮಹಾಸ್ವಾಮಿಗಳು ಸಂಚಾಲಕರು ಅನುಭವ ಮಂಟಪ ಬಸವಕಲ್ಯಾಣ.

ಪೂಜ್ಯಶ್ರೀ ಅನೀಲ ಮಹಾರಾಜರು ಕಲಖೋರಾ, ಪೂಜ್ಯಶ್ರೀ ಲಾವಣ್ಯದೇವಿ ಮಾತಾಜಿ ಬಸವ ಮಹಾಮನೆ ಬಸವಕಲ್ಯಾಣ, ಪೂಜ್ಯ ಶ್ರೀ ಬಸವ ದೇವರು ಬಸವ ತತ್ವ ಪ್ರಸಾರಕರು, ಬಸವಕಲ್ಯಾಣ ಪೂಜ್ಯ ಶ್ರೀ ಪರುಷಕಟ್ಟೆ ಚನ್ನಬಸವಣ್ಣ ಲಿಂಗಾಯತ ಮಹಾಮಠ, ಬೀದರ ಕಾರ್ಯಕ್ರಮದಲ್ಲಿ ವಿಶೇಷ ಅನುಭವ ನೀಡಲು: ಶರಣೆ ಡಾ. ವಚನಶೃತಿ ಪುರಾಣಿಕಮಠ ತಜ್ಞ ವೈದ್ಯರು, ಸರಕಾರಿ ಆಯುರ್ವೇದ ಆಸ್ಪತ್ರೆ, ಬೀದರ ಮುಖ್ಯ ಅತಿಥಿಗಳಾಗಿ: ಶರಣೆ ಪ್ರೀಯಾಂಕಾ ಸಂಜುಕುಮಾರ ಬಿರಾದಾರ ಯೋಗ ಶಿಕ್ಷಕರು, ಪುಣೆ ಉದ್ಘಾಟನೆ : ಶರಣ ಆಕಾಶ ಖಂಡಾಳೆ ಅಧ್ಯಕ್ಷರು, ತಾಲೂಕು ಬಸವ ಕೇಂದ್ರ, ಹುಲಸೂರ ಷಟಸ್ಥಲ ಧ್ವಜಾರೋಹಣ : ಶರಣೆ ಲಾವಣ್ಯ ಹಂಗರಗಿ ನೀಲಮ್ಮನ ಬಳಗ, ಬೀದರ ಗೌರವ ಉಪಸ್ಥಿತಿ : ರೂಪಾ ಎಸ್. ಬಿರಾದಾರ, ಮೀನಾಕ್ಷಿ ಧರ್ಮಣ್ಣನವರ, ಅಭಿಷೇಕ ಮಠಪತಿ, ಪ್ರೇಮ ರಾಜಭವನ, ಸುಪ್ರೀತ ಪತಂಗೆ, ಸದಾನಂದ ಬಿರಾದಾರ, ಅಧ್ಯಕ್ಷತೆ : ಶರಣೆ ಸುಮಿತ್ರಾ ದುಬಲಗುಂಡೆ ಎಲ್ಲರ ಸಮ್ಮುಖದಲ್ಲಿ ಈ ಕಾರ್ಯಕ್ರಮ ಮೊದಲ ದಿನ ಅದ್ದೂರಿಯಾಗಿ ನಡೆಯುತ್ತದೆ ಎಂದು ತಿಳಿಸಿದರು.

ಎರಡನೇ ದಿನ ದಿನಾಂಕ 03/04/2026 ರಂದು ಸಾಯಂಕಾಲ 4:00 ಗಂಟೆಗೆ ವಚನ ವಿಜಯೋತ್ಸವ ಭವ್ಯ ಮೆರವಣಿಗೆ ಜರುಗಲಿದೆ. ಅಲಂಕೃತ ವಾಹನದಲ್ಲಿ ವಿಶ್ವಗುರು ಬಸವಣ್ಣನವರ, ಮಹಾದೇವಿಯಕ್ಕನವರ ಭಾವಚಿತ್ರ ಮತ್ತು ವಚನ ಸಾಹಿತ್ಯದ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳ ಮೂಲಕ ನಡೆಯಲಿದೆ.

ಸಹಸ್ರಾರು ಶರಣ/ಶರಣೆಯರು ವಚನ ಗ್ರಂಥಗಳನ್ನು ತಲೆಮೇಲೆ ಹೊತ್ತು ಹೆಜ್ಜೆ ಹಾಕಲಿದ್ದು, ಛತ್ರಿ ಚಾಮರಗಳ ಷಟಸ್ಥಲ ಧ್ವಜಗಳ ಮೆರೆವಣಿಯು ಮೆರಗು ಹೆಚ್ಚಿಸಲಿವೆ. ದಾರಿಯುದ್ದಕ್ಕೂ ಛಳಿ ಹೊಡೆದು, ರಂಗೋಲಿಯಿಕ್ಕಿ, ಹೂವಾಲೆಗರೆದು ಪ್ರತಿ ಮನೆಯವರು ಸ್ವಾಗತಿಸಲಿದ್ದಾರೆ ಎಂದು ತಿಳಿಸಿದರು. ಅಂದು ಸಂಜೆ ಆರು ಗಂಟೆಗೆ 770 ಸಮವಸ್ತ್ರಧಾರಿ ಶರಣ/ ಶರಣೆಯರಿಂದ ಅಕ್ಕನ ಯೋಗಾಂಗ ತ್ರಿವಿಧಿ ಸಾಮೂಹಿಕ ಪಾರಾಯಣ ನಡೆಯಲಿದ್ದು, ಕಣ್ಣು ಕಿವಿಗಳಿಗೆ ಭಕ್ತಿ ಪುರಸ್ಸರವಾದ ಹಬ್ಬವನ್ನುಂಟು ಮಾಡಲಿದೆ. ವಚನ ನೃತ್ಯರೂಪಕವನ್ನು ಶರಣ ಪೂರ್ಣಚಂದ್ರಮೈನಾಳೆ ನೃತ್ಯಾಂಗನ ನಾಟ್ಯ ಮತ್ತು ಕಲಾ ಕೇಂದ್ರ, ಬೀದರ ಸೊಗಸಾದ ವಚನ ನೃತ್ಯ ಮಾಡಲಿದ್ದಾರೆ ಎಂದು ತಿಳಿಸಿದರು. ಅನುಭವ ಗೋಷ್ಠಿಯ ದಿವ್ಯ ಸಾನಿಧ್ಯವನ್ನು ನಾಡೋಜ ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ಅಧ್ಯಕ್ಷರು, ಅನುಭವ ಮಂಟಪ, ಬಸವಕಲ್ಯಾಣ ಪೂಜ್ಯಶ್ರೀ ಮ.ನಿ.ಪ್ರ. ಡಾ. ಶಿವಾನಂದ ಮಹಾಸ್ವಾಮಿಗಳು ಶ್ರೀಗುರು ಬಸವೇಶ್ವರ ಸಂಸ್ಥಾನ ಮಠ, ಹುಲಸೂರ–ಹುಲಕುಂಟಿ ಪೂಜ್ಯಶ್ರೀ ಮ.ಘ.ಚ. ಗುರುಬಸವ ಪಟ್ಟದೇವರ ಹಿರೇಮಠ ಸಂಸ್ಥಾನ, ಭಾಲ್ಕಿ ನೇತೃತ್ವ: ಪೂಜ್ಯಶ್ರೀ ಮ.ನಿ.ಪ್ರ ಪ್ರಭುದೇವ ಮಹಾಸ್ವಾಮೀಜಿ ಲಿಂಗಾಯತ ಮಹಾಮಠ, ಗೋರ್ಟಾ & ಬಸವಗಿರಿ, ಬೀದರ

ಸಮ್ಮುಖ : ಪೂಜ್ಯ ಶ್ರೀ ಬಸವಪ್ರಭು ಮಹಾಸ್ವಾಮಿಗಳು ಕಲ್ಯಾಣ ಮಹಾಮನೆ ಗುಣತೀರ್ಥ, ಬಸವಕಲ್ಯಾಣ ಉದ್ಘಾಟನೆ : ಶರಣ ಈಶ್ವರ ಬಿ.ಖಂಡ್ರೆ ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ ಅಧ್ಯಕ್ಷತೆ : ಶರಣ ಶರಣು ಸಲಗರ ಮಾನ್ಯ ಶಾಸಕರು, ಬಸವಕಲ್ಯಾಣ

ಮುಖ್ಯ ಅತಿಥಿಗಳು : ಶರಣ ವಿಜಯ ಸಿಂಗ್ ಮಾಜಿ ವಿಧಾನ ಪರಿಷತ್ ಸದಸ್ಯರು, ಬೀದರ

ಅನುಭಾವ : ಶರಣ ವಿಶ್ವಾರಾಧ್ಯ ಸತ್ಯಂಪೇಟೆ ಅಧ್ಯಕ್ಷರು, ಬಸವ ಮಾರ್ಗ ಪ್ರತಿಷ್ಠಾನ, ಸತ್ಯಂಪೇಟೆ.

ಅತಿಥಿಗಳು :

ಲತಾ ಎಸ್. ಹಾರಕುಡೆ, ಸುನೀತಾ ಮಮ್ಮಾ, ನೀಲಮ್ಮ ರೂಗನ, ಶಾಮಾ ಅನೀಲಕುಮಾರ ರಗಟೆ,

ಛಾಯಾ ವಿಜಯಕುಮಾರ ರಾಜಭವನ ಜಯಶ್ರೀ ಮಾಶೆಟ್ಟೆ ಮಹಿಳಾ ಅಧ್ಯಕ್ಷರು, ಬಸವ ಅನುಭವ ಮಂಟಪ, ಹೈದ್ರಾಬಾದ ಶರಣೆ ಗೋದಾವರಿ ತಾಯಿ ಲಿಂಗಾಯತ ಮಹಾಮಠ, ಗೋರ್ಟಾ(ಬಿ) ಎಲ್ಲ ಪರಮ ಪೂಜ್ಯರ ಹಾಗೂ ಅತಿಥಿ ಗಣ್ಯ ಮಾನ್ಯರ ಮಾಹಿತಿಯನ್ನು ಲಿಂಗಾಯತ ಮಹಾಮಠ, ಲಿಂಗಾಯತ ಸೇವಾದಳ ಹಾಗೂ ನೀಲಮ್ಮನ ಬಳಗದ ಸಮ್ಮುಖದಲ್ಲಿ ಪೂಜ್ಯಶ್ರೀ ಪ್ರಭುದೇವ ಮಹಾಸ್ವಾಮೀಜಿಯವರು ತಿಳಿಸಿದರು. ಗ್ರಾಮದಲ್ಲಿ ಸಡಗರ ಸಂಭ್ರಮದೊಂದಿಗೆ ಶರಣರ ಬರುವಿಕೆಗಾಗಿ ಮಕ್ಕಳು ಹಿರಿಯರು ಕಾತರದಿಂದ ಕಾಯುತ್ತಿದ್ದಾರೆ

ಶರಣರಿಗಾಗಿ ವಿಶೇಷ ಪ್ರಸಾದ ಶೇಂಗಾ ಹೋಳಿಗೆ. ಜೋಳದ ರೊಟ್ಟಿ ಶರಣೆಯರು ತಯಾರಿಸುತ್ತಿದ್ದಾರೆ.

ನಾಡಿನ ಮೂಲೆ ಮೂಲೆಯಿಂದ ಶರಣ ಬಳಗ ಗೋರ್ಟಾ ಗ್ರಾಮದತ ಧಾವಿಸಿ ಬರಲಿದ್ದಾರೆ ಎಂದು ತಿಳಿಸಿದರು. ಬಾಬುರಾವ ರಾಜೋಳೆ ,ಚಂದ್ರಕಾಂತ ಕಣಜೆ ,ಸುಭಾಷ ಪತಂಗೆ ,ಭರತರಾಜ್ ಪತಂಗೆ ,

ಬಸವರಾಜ ಮಾಶೆಟ್ಟೆ, ಮಹೇಶ ಪಟ್ನೆ ಮುಂತಾದವರು ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿದರು. ನೀಲಮ್ಮನ ಬಳಗದ ಅಧ್ಯಕ್ಷರಾದ ವಿಜಯಲಕ್ಷ್ಮಿ ರಾಜೋಳೆ ಸ್ವಾಗತ ಕೋರಿದರು. ಲಿಂಗಾಯತ ಸೇವಾದಳದ ಅಧ್ಯಕ್ಷರಾದ ಸುಪ್ರೀತ ಪತಂಗೆ ನಿರೂಪಿಸಿದರು.

### ಮೃತರ ಕುಟುಂಬಕ್ಕೆ ಸಚಿವ ದರ್ಶನಾಪುರ ಸಾಂತ್ವನ

# ಮಕ್ಕಳ ಸಾವು ತೀವ್ರ ದುಃಖ ತಂದಿದೆ: ಸಚಿವ ದರ್ಶನಾಪುರ



• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ

ಪಟ್ಟಣ ಸಮೀಪದ ನಗನೂರ ಗ್ರಾಮದಲ್ಲಿ ಭಾನುವಾರ ಸಂಭವಿಸಿದ ಭೀಕರ ದುರಂತದಲ್ಲಿ, ಕೃಷಿ ಹೊಂಡದಲ್ಲಿ ಮುಳುಗಿ ಒಂದೇ ಕುಟುಂಬದ ನಾಲ್ವರು ಮಕ್ಕಳು ದಾರುಣವಾಗಿ ಸಾವನ್ನಪ್ಪಿದ್ದರು. ಈ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಹಾಗೂ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಹಾಗೂ ಜಿಲ್ಲಾಧಿಕಾರಿ ಹರ್ಷಲ್ ಬೋಯರ್ ಅವರು ಸೋಮವಾರ ಮೃತ ಕುಟುಂಬದ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿದರು.

ಕಂದಮ್ಮಗಳನ್ನು ಕಳೆದುಕೊಂಡ ತಂದೆ-ತಾಯಿ ಹಾಗೂ ಕುಟುಂಬದವರ ಆಕ್ರಂದನ ಕಂಡು ಸಚಿವರೂ ಸಹ ಭಾವುಕರಾದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಒಂದೇ ಕುಟುಂಬದ ನಾಲ್ವರು ಮಕ್ಕಳು ಸಾವನ್ನಪ್ಪಿರುವುದು ಅತ್ಯಂತ ನೋವಿನ ಸಂಗತಿ. ಪೋಷಕರು ಮಕ್ಕಳ ಬಗ್ಗೆ ಸದಾ ಕಾಳಜಿ ವಹಿಸಬೇಕು; ಕೆರೆ, ಕಾಲುವೆ ಹಾಗೂ ಬಾವಿಗಳ ಹತ್ತಿರ ಮಕ್ಕಳನ್ನು ಕಳುಹಿಸಬಾರದು, ಎಂದು ಮನವಿ ಮಾಡಿದರು. ಮೃತರ ಕುಟುಂಬಕ್ಕೆ ಸಚಿವರು ವೈಯಕ್ತಿಕವಾಗಿ ಒಂದು ಲಕ್ಷ ರೂಪಾಯಿಗಳ ಧನಸಹಾಯವನ್ನು ನೀಡಿದರು. ಅಲ್ಲದೆ, ಶಿಕ್ಷಣ ಇಲಾಖೆ ಹಾಗೂ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಸರ್ಕಾರದಿಂದ ಸಿಗಬೇಕಾದ ಸವಲತ್ತುಗಳ ಕೊಡಿಸುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಹರ್ಷಲ್ ಬೋಯರ್, ಜಿ.ಪಂ. ಮಾಜಿ ಉಪಾಧ್ಯಕ್ಷ ಶಂಕ್ರಣ್ಣ ವಣಿಕ್ಯಾಳ, ಶಹಾಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಮಹಾಂತ ಚಂದಾಪುರ, ಮುಖಂಡರಾದ ಹಳ್ಳೆಪ್ಪ ಹವಾಲ್ದಾರ, ಚೆನ್ನಾರೆಡ್ಡಿ ದೇಸಾಯಿ, ಶರಣಪ್ಪ ದೇಸಾಯಿ, ಇಒ ಬಸವರಾಜ ಸಜ್ಜನ, ಪಿಡಿಒ ಮಡಿವಾಳಪ್ಪ ಎಸ್. ತಳವಾರ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.ಘಟನಾ ಸ್ಥಳ ಪರಿಶೀಲನೆ ನಡೆಸಿದ ಸಚಿವರು:

ದುರಂತ ಸಂಭವಿಸಿದ ಕೃಷಿ ಹೊಂಡವನ್ನು ವೀಕ್ಷಿಸಿದ ಸಚಿವ ದರ್ಶನಾಪುರ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದ ಇಂತಹ ಕೃಷಿ ಹೊಂಡಗಳನ್ನು ತಕ್ಷಣವೇ ಮುಚ್ಚುವಂತೆ ಅಥವಾ ಸೂಕ್ತ ಭದ್ರತೆ ಒದಗಿಸುವಂತೆ ಸ್ಥಳದಲ್ಲಿದ್ದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

# ಲಕ್ಷ್ಮಿ ವೆಂಕಟೇಶ್ವರ ಮಹಾರಥೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಶ್ರೀ ಲಕ್ಷ್ಮಿ ವೆಂಕಟೇಶ್ವರ ಜಾತ್ರಾ ಮಹೋತ್ಸವ ಬಹಳ ಅದ್ದೂರಿಯಾಗಿ ಆಚರಣೆ ಮಾಡಲಾಗುತ್ತದೆ ಎಂದು ಅರ್ಚಕ ವೇ.ಮೂ.ಹಂಪಯ್ಯ ಸ್ವಾಮಿ ಹಿರೇಮಠ ಪ್ರಕಟಣೆಗೆ ತಿಳಿಸಿದ್ದಾರೆ.

ಕರ್ನಾಟಕದ ಗಡಿಭಾಗ ಹೋಗಿರುವ ನಾರಾಯಣಪೇಟೆ ಜಿಲ್ಲೆಯ ಮಕ್ತಲ್ ತಾಲೂಕಿನ ಲಿಂಗದಹಳ್ಳಿಯಲ್ಲಿ ಶ್ರೀ ಲಕ್ಷ್ಮಿ ವೆಂಕಟೇಶ್ವರ ಜಾತ್ರಾ ಮಹೋತ್ಸವ ಹಾಗೂ ಕಲ್ಯಾಣ ಮಹೋತ್ಸವಕ್ಕೆ ದಿವ್ಯ ಸಾನಿಧ್ಯವನ್ನು ಪರಮಪೂಜ್ಯ ಷ.ಬ್ರ. ಗುರುಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಸಂಸ್ಥಾನ ಹಿರೇಮಠ ಕಡೇಚೂರ, ಮ.ನಿ.ಪ್ರ. ಪಂಚಮ ಸಿದ್ದಲಿಂಗ ಮಹಾಸ್ವಾಮಿಗಳು ನೆರಡಗಮ, ಷ.ಬ್ರ ಶಂಭೋ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು ಬ್ರಹ್ಮನಮಠ ಸುಲ್ತಾನಪುರ್, ಷ.ಬ್ರ.ಶಾಂತ ಮಲ್ಲಿಕಾರ್ಜುನ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಹೆಡಗಿಮದ್ರ, ಡಾ. ಕ್ಷೀರಲಿಂಗ ಮಹಾಸ್ವಾಮಿಗಳು ಪಾರ್ವತಿ ಪರಮೇಶ್ವರ ದೇವಸ್ಥಾನ ಚೇಗುಂಟ, ಆಂಜನೇಯ ಗುರುಗಳು ತಂಗಡಗಿ ಇವರ ದಿವ್ಯ ಸಾನಿಧ್ಯ ದಲ್ಲಿ ಜರಗುವುದು. ದಿನಾಂಕ 01. 04.2026 ರಂದು ಮುಂಜಾನೆ ರಂಗಸ್ಥಳ ಸಾಯಂಕಾಲ ಉಚ-ಯ ಮಹೋತ್ಸವ, 02.04.2026 ರಂದು ಸಾಯಂಕಾಲ ಮಹಾ ರಥೋತ್ಸವ ಹಾಗೂ ಕಲ್ಯಾಣ ಮಹೋತ್ಸವ ಮತ್ತು ಧರ್ಮ ಸಭೆ ಜರಗುವುದು.

ದಿನಾಂಕ 03.04.2026 ರಂದು ಸಾಯಂಕಾಲ ಹಾಲು ಹೋಕಳಿಕೆ ಬಹಳ ಅದ್ದೂರಿಯಾಗಿ ಆಚರಣೆ ಮಾಡಲಾಗುತ್ತದೆ ಆದ್ದ-ರಿಂದ ದೇವಸ್ಥಾನದ ಅರ್ಚಕರು ಸುತ್ತಮುತ್ತಲಿನ ಗ್ರಾಮಸ್ಥರು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀ ಲಕ್ಷ್ಮಿ ವೆಂಕಟೇಶ್ವರ ಆಶೀರ್ವಾದ ಪಡೆದು ಪುನೀತರಾಗಿ ಎಂದು ದೇವಸ್ಥಾನದ ಅರ್ಚಕ ಹಂಪಯ್ಯ ಸ್ವಾಮಿ ಹಿರೇಮಠ ಹೇಳಿದರು.

# ದ್ವಿಚಕ್ರವಾಹನ ಕಳ್ಳನ ಬಂಧನ 14 ಬೈಕ್ ವಶ



• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ನಗರ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿ ಬೈಕ್ ಕಳ್ಳನನ್ನು ಬಂಧಿಸಿ ಅಂತರ್ ಜಿಲ್ಲೆ ಮೋಟಾರ್ ಸೈಕಲ್ ಕಳ್ಳತನದಲ್ಲಿ ಭಾಗಿಯಾಗಿದ್ದ ಮೈಬೂಬ್ ವ್ಯಕ್ತಿಯನ್ನು ಬಂಧಿಸಿದ್ದಾರೆ ಮತ್ತು ಸುಮಾರು ₹12.81 ಲಕ್ಷ ಮೌಲ್ಯದ 14 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ವಿಜಯನಗರ ಜಿಲ್ಲಾ ಎಸ್ ಪಿ ಜಾಹ್ನವಿ ಅವರು ಮಾರ್ಚ್ 30 ರಂದು ಸುದ್ದಿ ಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಫೆ. 21 ರಂದು ಸಂಜೆ 05-00 ಗಂಟೆಗೆ ದೂರುದಾರ ವೆಂಕಟೇಶ್ ಎಲ್ ರವರು ಠಾಣೆಗೆ ಹಾಜರಾಗಿ, 15.ಫೆ.2026 ರಂದು ಬೆಳಿಗ್ಗೆ 11-40 ಗಂಟೆ ಸುಮಾರಿಗೆ ನನ್ನ ಹಿರೋ ಸ್ಪೆಂಡರ್ ಪ್ರೋ ಮೋಟಾರ್ ಸೈಕಲ್ ನಂ: ಕೆಎ-35 ಇಬಿ-4166 ಇದರ ಹೊಸಪೇಟೆ ಪಟ್ಟಣದ ಶ್ಯಾನ್ ಭಾಗ್ ಟಿಫಿನ್ ರೂಂ ಮುಂಭಾಗದ ಬಸ್ ಸ್ಟ್ಯಾಂಡ್ ಕಡೆಗೆ ಹೋಗುವ ರಸ್ತೆ ಪಕ್ಕದ ನಿಲ್ಲಿಸಿದ್ದ ಮೋಟಾರ್

ಸೈಕಲ್‌ನ್ನು ಯಾರೋ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆಂದು ನೀಡಿದ ದೂರಿನ ಮೇರೆಗೆ ಪಟ್ಟಣ ಠಾಣೆಯಲ್ಲಿ ಕಾಯ್ದೆ ಪ್ರಕಾರ ಪ್ರಕರಣ ದಾಖಲಾಗಿರುತ್ತದೆ. ಪ್ರಕರಣದ ಪತ್ತೆಗಾಗಿ ಎಸ್. ಜಾಹ್ನವಿ ಐ.ಪಿ.ಎಸ್. ಪೊಲೀಸ್ ಅಧೀಕ್ಷಕರು, ವಿಜಯನಗರ ಜಿಲ್ಲೆ ರವರು ವಿಶೇಷ ತಂಡವನ್ನು ರಚಿಸಿದ್ದು, ಮಂಜುನಾಥ, ಅಡಿಷನಲ್ ಎಸ್.ಪಿ.ಡಾ: ಮಂಜುನಾಥ, ತಳವಾರ, ಡಿ.ಎಸ್.ಪಿ. ಹೊಸಪೇಟೆ ರವರ ಮಾರ್ಗದರ್ಶನದಲ್ಲಿ ಫೈಜುಲ್ಲಾ ಪಿ.ಐ. ಪಟ್ಟಣ ಠಾಣೆ ರವರ ನೇತೃತ್ವದ .ರಾಜಶೇಖರ್ (ಕಾ.ಸು) ಪರಮೇಶ್ವರಪ್ಪ (ತನಿಖೆ) ಹಾಗು ಅಪರಾಧ ಸಿಬ್ಬಂದಿಗಳು ಒಳಗೊಂಡ ಇರುತ್ತದೆ.



ವಿಜಯನಗರ,ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಮಹಾವೀರ ಜಯಂತಿ ಪ್ರಯುಕ್ತ ಮಜಹಾವೀರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಜಯಂತಿ ಆಚರಿಸಲಾಯಿತು.

ಈ ವೇಳೆ ಉಪವಿಭಾಗಾಧಿಕಾರಿ ವಿವೇಕ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಂಜುನಾಥ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗಣ್ಣ ರಂಗಣ್ಣನವರ ಸೇರಿದಂತೆ ಮತ್ತಿತರರು ಇದ್ದರು.

# ಪುಟ್ಟ ಮಗು ಮೋನಿಕಾ ಹುಟ್ಟು ಹಬ್ಬದ ಶುಭ ಕೋರಿದ ಬಸಪ್ಪ ಬಿರಾದಾರ್



• ಮಲ್ಲಮ್ಮ ನುಡಿ ವಾರ್ತೆ ಪೀಣ್ಯ ದಾಸರಹಳ್ಳಿ

ಈಗಿನ ಕಾಲದಲ್ಲಿ ಧಾರ್ಮಿಕ ಸಂಪ್ರದಾಯಗಳು ಮರೆಮಾಚಿ ಹೋಗುವ ಭಯದಲ್ಲಿ ನಾವಿದ್ದೇವೆ ಎಂದು ಜನ ಪ್ರಿಯ ಸಮಾಜ ಸೇವಕ ಸಮಾಜ ಅಭಿವೃದ್ಧಿ ಹರಿಕಾರ ವಾಗ್ಮಿಗಳು ಬುದ್ದಿಜೀವಿಗಳು ಚಿಂತಕರು ಮತ್ತು ರಾಷ್ಟ್ರೀಯ ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಾದ ಡಾ ಸಂಗನ ಬಸಪ್ಪ ಬಿರಾದಾರ್ ಹೇಳಿದರು.

ಅವರು ಕುಣಿಗಲ್ ತಾಲೂಕಿನ ಜಲಗರೆ ಗ್ರಾಮದ ಪ್ರಸಿದ್ಧ ದೇವತೆಗಳಲ್ಲಿ ಒಂದಾದ ಆದಿಶಕ್ತಿ ಚಿಕ್ಕಮ್ಮ ದೊಡ್ಡಮ್ಮ ದೇವಸ್ಥಾನದ ಭೋಜನ ಹಾಲಿನಲ್ಲಿ ಅರ್ಜುನ್ ಮತ್ತು ಅವರ ಧರ್ಮಪತ್ನಿ ತೇಜಸ್ವಿನಿ ಅರ್ಜುನ್ ಹಾಗೂ ಮೋನಿಕ ಅವರ ಅಜ್ಜ ಹಾಗೂ ಪತ್ರಕರ್ತ ಜಿ. ನಂದೀಶ್ ಅವರ ನೇತೃತ್ವದಲ್ಲಿ ಆಯೋಜಿಸಿದ್ದ ಮುದ್ದು ಮಗಳಾದ ಮೋನಿಕ ಅವರ ಹುಟ್ಟು ಹಬ್ಬದ ಸಂಭ್ರಮದಲ್ಲಿ ಭಾಗವಹಿಸಿ ಮೋನಿಕಾಳಿಗೆ ಶಾಲು ಹೊದಿಸಿ ಫಲಪುಷ್ಪದೊಂದಿಗೆ ಗೌರವಿಸಿ ನೆನಪಿನ ಕಾಣಿಕೆ ನೀಡಿ ಮಾತನಾಡಿದ ಅವರು ತೇಜಸ್ವಿನಿ, ಅರ್ಜುನ್ ಮತ್ತು ಜಿ.ನಂದೀಶ್ ಭಾರತೀಯ ಹಿಂದೂ ಧರ್ಮದ ಪರಂಪರೆ ಸಂಪ್ರದಾಯ ಸಂಸ್ಕೃತಿ ಪಾಲಿಸುವ ಮೂಲಕ ಈಗಿನ ಪೀಳಿಗೆಗೆ ಧರ್ಮ ಮತ್ತು ಸಂಪ್ರದಾಯಗಳು ಪರಿಚಯಿಸುವ ಕೆಲಸ ಮಾಡಿದ್ದಾರೆ ಒಂದು ಕಡೆ ದೇವಸ್ಥಾನದಲ್ಲಿ ಪೂಜಾ ಪುನಸ್ಕಾರ ಆಚಾರ ವಿಚಾರಗಳನ್ನು ತಿಳಿಸಿಕೊಟ್ಟಂತಾಗಿದೆ ಎಂದು ಚಿಂತಕ ಡಾ. ಸಂಗನ ಬಸಪ್ಪ ಬಿರಾದಾರ್ ಮೋನಿಕಾಗೆ ಶುಭ ಕೋರಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಅರ್ಜುನ್, ತೇಜಸ್ವಿನಿ, ಉಜ್ವಲ್, ಶ್ರೀ ಪತಿ, ಪ್ರಭು, ಸರಸ್ವತಿ, ನಂದೀಶ್, ಗಿರೀಶ್, ಪ್ರಿಯ, ಚಂದ್ರಶೇಖರ್, ಮಂಜು, ಪ್ರದೀಪ್, ದೇವರಾಜ್, ಅಯ್ಯಣ ಮಾಸ್ಟರ್ ಸೇರಿದಂತೆ ಅರ್ಜುನ್ ಮತ್ತು ತೇಜಸ್ವಿನಿ ಕುಟುಂಬಸ್ಥರು ಮುಂತಾದವರು ಉಪಸ್ಥಿತರಿದ್ದು ಪುಟ್ಟ ಮಗು ಮೋನಿಕಾಳಿಗೆ ಸಿಹಿ ತಿನ್ನಿಸಿ ಶುಭ ಹಾರೈಸಿದರು.

# ಹಿರೇಮಠ ಸಂಸ್ಥಾನದಲ್ಲಿ ಅಮೃತ ಮಹೋತ್ಸವ ಪೋಸ್ಟರ್ ಬಿಡುಗಡೆ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ಪಟ್ಟಣದಲ್ಲಿ ಹಿರೇಮಠ ಸಂಸ್ಥಾನ ಮತ್ತು ಅಮೃತ ಮಹೋತ್ಸವ ಸಮಿತಿ ವತಿಯಿಂದ ಬರುವ ಏ.20 ರಿಂದ 22ರ ವರೆಗೆ ಮೂರು ದಿವಸಗಳ ಕಾಲ ನಡೆಯಲಿರುವ ಐತಿಹಾಸಿಕ ಸಮಾರಂಭದಲ್ಲಿ ದೇಶದ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ಎಐಸಿಸಿ ಅಧ್ಯಕ್ಷ ಡಾ.ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ, ರಾಜ್ಯ ಮತ್ತು ಕೇಂದ್ರದ ಸಚಿವರು, ಪ್ರತಿಪಕ್ಷದ ನಾಯಕರು ಭಾಗವಹಿಸುವ ಸಾಧ್ಯತೆ ಇದೆ ಎಂದು ಸ್ವಾಗತ ಸಮಿತಿ ಅಧ್ಯಕ್ಷರು, ಜಿಲ್ಲಾ ಉಸ್ತುವಾರಿ ಸಚಿವರು ಆಗಿರುವ ಈಶ್ವರ ಖಂಡ್ರೆ ಹೇಳಿದರು.

ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಸೋಮವಾರ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಈ ವರ್ಷ ಬಸವ ಜಯಂತಿ, ವಚನ ಜಾತ್ರೆ-2026, ಡಾ.ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೋತ್ಸವ ಮತ್ತು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಏಕಕಾಲಕ್ಕೆ ತ್ರಿವೇಣಿ ಸಂಗಮದಂತೆ ಕೂಡಿ ಬಂದಿರುವುದು ಅತ್ಯಂತ ಖುಷಿ ತಂದು ಕೊಟ್ಟಿದೆ.

ಈ ಐತಿಹಾಸಿಕ ಸಮಾರಂಭಕ್ಕೆ ಕರ್ನಾಟಕ ಅಲ್ಲದೇ ನೆರೆಯ ತೆಲಂಗಾಣ, ಮಹಾರಾಷ್ಟ್ರ, ಆಂಧ್ರಪ್ರದೇಶ ರಾಜ್ಯ ಸೇರಿ ಮುಂತಾದ ಕಡೆಗಳಿಂದ ಲಕ್ಷಾಂತರ ಭಕ್ತರ ಸಮಾಗಮ ಆಗಲಿದೆ.ಹಾಗಾಗಿ ಈ ಮೂರು ಕಾರ್ಯಕ್ರಮಗಳು ಅದ್ದೂರಿ ಮತ್ತು ಅರ್ಥಪೂರ್ಣವಾಗಿ ಆಚರಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಸಮಾರಂಭದ ಪ್ರಚಾರ ಸೇರಿ ಆಗಮಿಸುವ ಗಣ್ಯರು, ಭಕ್ತರಿಗೆ ವಸತಿ, ದಾಸೋಹ ವ್ಯವಸ್ಥೆ ಸೇರಿ ಮುಂತಾದ ವ್ಯವಸ್ಥೆಗಳು ಭರದಿಂದ ಸಾಗಿವೆ ಎಂದು ತಿಳಿಸಿದರು.

ನೇತೃತ್ವವಹಿಸಿದ್ದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ಮೂರು ದಿವಸದ ಸಮಾರಂಭದಲ್ಲಿ ಭಾಗಹಿಸುವುದು ನಮ್ಮೆಲ್ಲರ ಸೌಭಾಗ್ಯ ಎನಿಸಿದೆ. ಎಲ್ಲ ಸಮಿತಿ ಅಧ್ಯಕ್ಷರು, ಪದಾಧಿಕಾರಿಗಳು, ಭಕ್ತರು ತನು, ಮನ, ಧನದಿಂದ ಸೇವೆ ಸಲ್ಲಿಸಬೇಕು ಎಂದು ಮನವಿ ಮಾಡಿದರು.

ಸಂಸದ ಸಾಗರ ಖಂಡ್ರೆ ಸಮಾರಂಭದ ವಾಲ್ ಪೋಸ್ಟರ್ ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮಾಜಿ ಅಧ್ಯಕ್ಷ ಶಶಿಧರ ಕೋಸಂಬೆ, ದಾಸೋಹ ಸಮಿತಿ ಅಧ್ಯಕ್ಷ ಚಂದ್ರಕಾಂತ ಪಾಟೀಲ್, ವಾಲಿಬಾಲ್ ಪಂದ್ಯಾವಳಿ ಸಮಿತಿ ಅಧ್ಯಕ್ಷ ವಿಲಾಸ ಬಕ್ಕಾ, ಯೋಗ ಸಮಿತಿ ಅಧ್ಯಕ್ಷ ಚಂದ್ರಕಾಂತ ಹೈಬತಪೂರೆ, ಪ್ರವಚನ ಸೇವಾ ಸಮಿತಿ ಅಧ್ಯಕ್ಷೆ ಮಲ್ಲಮ್ಮ ಆರ್ ಪಾಟೀಲ್, ಪ್ರಮುಖರಾದ ಸಿದ್ದಯ್ಯ ಕವಡಿಮಠ, ಬಸವರಾಜ ಮರೆ, ಮಹಾದೇವ ಬೇಲೂರೆ, ಅಶೋಕ ಬಾವುಗೆ, ಸುನಿತಾ ಮಮ್ಮಾ, ಪಾರ್ವತಿ ಧುಮನಸೂರೆ ಸೇರಿದಂತೆ ಹಲವರು ಇದ್ದರು. ದೀಪಕ ಠಮಕೆ ನಿರೂಪಿಸಿ, ವಂದಿಸಿದರು.

> “ಪಟ್ಟಣದಲ್ಲಿನ ಮೂರು ದಿವಸದ ಸಮಾರಂಭದಲ್ಲಿ ಭಾಗವಹಿಸುವ ನಾನಾ ಮಠಾಧೀಶರು, ಗಣ್ಯರಿಗೆ ಉತ್ತಮ ಆತಿಥ್ಯ ನೀಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದ್ದು ವ್ಯವಸ್ಥೆಯಲ್ಲಿ ಕುಂದು ಕೊರತೆ ಆಗದಂತೆ ವ್ಯವಸ್ಥೆ ನೋಡಿಕೊಳ್ಳುವ ಸಮಿತಿ ಪದಾಧಿಕಾರಿಗಳು ನಿಗಾ ವಹಿಸಬೇಕು.
>
> **ಈಶ್ವರ ಖಂಡ್ರೆ ಜಿಲ್ಲಾ ಉಸ್ತುವಾರಿ ಸಚಿವರು ಬೀದರ್**

> “ಮೂರು ಸಮಾರಂಭಗಳು ತ್ರಿವೇಣಿ ಸಂಗಮದಂತೆ ಏಕಕಾಲಕ್ಕೆ ಕೂಡಿ ಬಂದಿವೆ. ಡಾ.ಬಸವಲಿಂಗ ಪಟ್ಟದ್ದೇವರು ಸಲ್ಲಿಸುತ್ತಿರುವ ಸಮಾಜ ಸೇವೆ ನಮ್ಮೆಲ್ಲರಿಗೆ ಪ್ರೇರಣೆಯಾಗಿದೆ. ಎಲ್ಲರೂ ಸೇರಿ ಪೂಜ್ಯರ ಅಮೃತ ಮಹೋತ್ಸವ ಅರ್ಥಪೂರ್ಣವಾಗಿ ನಿಜವಾದ ಗೌರವ ಸಲ್ಲಿಸಬೇಕು.
>
> **ಗುರುಬಸವ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ**

### ಪಾಟೀಲ್‌ಗೆ ಸನ್ಮಾನ

“2026ನೇ ಸಾಲಿನ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತೆ ಪಟ್ಟಣದ ನಿವಾಸಿ ಮಲ್ಲಮ್ಮ ಆರ್ ಪಾಟೀಲ್ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಸನ್ಮಾನಿಸಿ, ಅಭಿನಂದಿಸಿದರು. ಈ ಸಂದರ್ಭದಲ್ಲಿ ಉಭಯ ಪೂಜ್ಯರು, ಸಂಸದ ಸಾಗರ ಖಂಡ್ರೆ, ಶಶಿಧರ ಕೋಸಂಬೆ, ಮಹಾದೇವ ಬೇಲೂರೆ, ಅಶೋಕ ಬಾವುಗೆ ಇದ್ದರು.

# ಕುಡಿಯುವ ನೀರಿನ ಪರಿಶೀಲನಾ ಸಭೆ

• ಮಲ್ಲಮ್ಮ ನುಡಿ ವಾರ್ತೆ, ಔರಾದ ಬಿ

ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರ ಅಧ್ಯಕ್ಷತೆಯಲ್ಲಿ ಏಪ್ರಿಲ್ 2 ರಂದು ಬೆಳಗ್ಗೆ 10 ಗಂಟೆಗೆ ತಾಲ್ಲೂಕು ಪಂಚಾಯತ್ ಕಛೇರಿ ಸಭಾಂಗಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ಪರಿಶೀಲನಾ ಸಭೆ ಏರ್ಪಡಿಸಲಾಗಿದೆ.

ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕಿನ ತಹಸೀಲ್ದಾರರು, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಜೆಸ್ಕಾಂ, ಪುರಸಭೆ ಅಧಿಕಾರಿಗಳು, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸೇರಿದಂತೆ ಸಂಬಂಧಪಟ್ಟ ಎಲ್ಲ ತಾಲ್ಲೂಕು ಮಟ್ಟದ ಅಧಿಕಾರಿಗಳು ಜಲ ಜೀವನ್ ಮಿಷನ್ (ಜೆಜೆಎಂ), ಬಹುಗ್ರಾಮ ಕುಡಿಯುವ ನೀರಿನ ಯೋಜನೆ (ಮಲ್ಟಿವಿಲೇಜ್ ಸ್ಕೀಮ್) ಸೇರಿದಂತೆ ವಿವಿಧೆಡೆ ನಡೆಯುತ್ತಿರುವ ಕುಡಿಯುವ ನೀರು ಸರಬರಾಜಿಗೆ ಸಂಬಂಧಿಸಿದ ಎಲ್ಲ ಯೋಜನೆಗಳ ಪ್ರಗತಿ ವಿವರಗಳು, ನೀರಿನ ಸಮಸ್ಯೆಯಿರುವ ಗ್ರಾಮಗಳು ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿಯೊಂದಿಗೆ ನಿಗದಿತ ಸಮಯಕ್ಕೆ ಸಭೆಗೆ ಹಾಜರಾಗುವಂತೆ ಕೋರಲಾಗಿದೆ.

ಕುಡಿಯುವ ನೀರಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಸಮಸ್ಯೆಗಳಿದ್ದಲ್ಲಿ ತಾಲ್ಲೂಕು ಪಂಚಾಯಿತಿ ಕಛೇರಿಯಲ್ಲಿರುವ ಶಾಸಕರ ಕಛೇರಿಗೆ ಸಂಪರ್ಕಿಸಬಹುದೆಂದು ಶಾಸಕರ ಕಛೇ-ರಿಯ ಪ್ರಕಟಣೆ ತಿಳಿಸಿದೆ.

## ತಂದೆಯ ಸಾವಿನ ನಡುವೆಯೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ ವಿದ್ಯಾರ್ಥಿನಿ






• ಮಲ್ಲಮ್ಮ ನುಡಿ ವಾರ್ತೆ, ಗುರುಮಠಕಲ್

ಗುರುಮಠಕಲ್ ಪಟ್ಟಣದ ಕಟ್ಟಲಗೇರಾ ನಿವಾಸಿ ಅಂಜಪ್ಪ ಅವರು ಅನಾರೋಗ್ಯದಿಂದ ನಿಧನರಾಗಿರುವ ಹಿನ್ನೆಲೆಯಲ್ಲಿ ಕುಟುಂಬದಲ್ಲಿ ಶೋಕಮಯ ವಾತಾವರಣ ನಿರ್ಮಾಣವಾಗಿದೆ. ಈ ನಡುವೆಯೇ ಅವರ ಪುತ್ರಿ ಅನುಷಾ ದುಃಖದ ಪರಿಸ್ಥಿತಿಯಲ್ಲಿಯೇ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗಿರುವುದು ಗಮನಾರ್ಹವಾಗಿದೆ.

ತಂದೆಯ ಅಗಲಿಕೆಯಿಂದ ಮನನೊಂದುಕೊಂಡಿದ್ದ ವಿದ್ಯಾರ್ಥಿನಿಯನ್ನು ಬಡಾವಣೆಯ ಹಿರಿಯರು ಹಾಗೂ ಶಾಲೆಯ ಶಿಕ್ಷಕರು ಪರೀಕ್ಷೆ ಬರೆಯಲು ಮನವೊಲಿಸಿದರು.

ಅವರ ಪ್ರೇರಣೆಯಿಂದ ವಿದ್ಯಾಭ್ಯಾಸವೇ ಭವಿಷ್ಯದ ದಾರಿ ಎಂಬ ನಂಬಿಕೆಯಿಂದ ವಿದ್ಯಾರ್ಥಿನಿ ಕಣ್ಣೀರಿನ ನಡುವೆಯೇ ಪರೀಕ್ಷೆ ಬರೆದಳು.

ವಿದ್ಯಾರ್ಥಿನಿಯ ಆತ್ಮಸ್ಥೈರ್ಯ ಹಾಗೂ ಸಂಕಲ್ಪವನ್ನು ಸ್ಥಳೀಯರು ಮತ್ತು ಶಿಕ್ಷಕರು ಶ್ಲಾಘಿಸಿದ್ದು, ಇಂತಹ ಸಂಕಷ್ಟದಲ್ಲೂ ಶಿಕ್ಷಣದತ್ತ ತೋರಿದ ಬದ್ಧತೆ ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿದೆ ಎಂದು ತಿಳಿಸಿದ್ದಾರೆ.

# ಲಿಂಗೇಶ್ವರ ದೇವಸ್ಥಾನಕ್ಕೆ ರಾಮಯ್ಯ ಭೇಟಿ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಕಲ್ಯಾಣ ಕರ್ನಾಟಕ ಭಾಗದ ವಡಗೇರಾ ತಾಲೂಕಿನ ಹೈಯ್ಯಾಳ (ಬಿ) ಗ್ರಾಮದ ಶ್ರೀ ಹೈಯ್ಯಾಳ ಲಿಂಗೇಶ್ವರ ದೇವಸ್ಥಾನಕ್ಕೆ ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿ ಎಂ. ರಾಮಯ್ಯನವರು ಭೇಟಿ ನೀಡಿ ದರ್ಶನ ಪಡೆದರು. ನಂತರ ಕುರುಬ ಸಂಘದ ಜಿಲ್ಲಾಧ್ಯಕ್ಷ ಮಲ್ಲಣ್ಣ ಐಕೂರ ಮಾತನಾಡಿ ಕಲ್ಯಾಣ ಕರ್ನಾಟಕ ಭಾಗದ ಅತ್ಯಂತ ದೊಡ್ಡ ದೇವಸ್ಥಾನ ಇದಾಗಿದ್ದು ವರ್ಷದಲ್ಲಿ ಎರಡು ಬಾರಿ ಜಾತ್ರೆ ಅಮಾವಾಸ್ಯೆ ಹಾಗೂ ಇನ್ನಿತರ ಸಮಯದಲ್ಲಿ ಲಕ್ಷಾನುಗಟ್ಟಲೆ ಭಕ್ತರು ಇಲ್ಲಿ ಸೇರುತ್ತಾರೆ ಇಲ್ಲಿ ಬರುವ ಭಕ್ತರಿಗೆ ಸರಿಯಾದ ಕಟ್ಟಡಗಳ ವ್ಯವಸ್ಥೆ ಇಲ್ಲ ಇದು ಧಾರ್ಮಿಕ ದತ್ತಿ ಇಲಾಖೆಗೆ ಒಳಪಡುತ್ತದೆ ಆದರೆ ಸರ್ಕಾರಗಳು ಅಭಿವೃದ್ಧಿ ಪಡಿಸುವಲ್ಲಿ ಹಿಂದೇಟು ಹಾಕುತ್ತಿವೆ ಈಗಾಗಲೇ ದೇವಸ್ಥಾನದ ಕಟ್ಟಡ ಅರ್ಧಕ್ಕೆ ನಿಂತಿ-ದ್ದು ದೇವಸ್ಥಾನದ ಅಭಿವೃದ್ಧಿ ಹೆಚ್ಚಿನ ಅನುದಾನ ನೀಡುವಂತೆ ಸಿಎಂ ಜಂಟಿ ಕಾರ್ಯದರ್ಶಿಗಳಿಗೆ ಮನವಿ ಮಾಡಿಕೊಂಡರು ಮನವಿಗೆ ಸ್ಪಂದಿಸಿದ ಸಿಎಂ ಜಂಟಿ ಕಾರ್ಯದರ್ಶಿ ಎಂ.ರಾಮಯ್ಯ ಮಾತನಾಡಿ ದೇವಸ್ಥಾನದ ಅಭಿವೃದ್ಧಿಗೆ ಅನುದಾನ ಒದಗಿಸುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಮಲ್ಲಣ್ಣ ಐಕೂರ, ಕುರುಬ ಸಂಘದ ನಿರ್ದೇಶಕ ಶಿವರಾಜ್ ಪದ್ಮಣ್ಣೂರ, ನಾಗರಾಜ್ ಕೊಂಡಾಪುರ, ಅಪ್ಪಣ್ಣ,ದೇವು,ಹಾಗೂ ದೇವಸ್ಥಾನದ ಪೂಜಾರಿಗಳು ಉಪಸ್ಥಿತರಿದ್ದರು.

# ಪ್ರತಿಭೆ ಅನಾವರಣಕ್ಕೆ ವಾರ್ಷಿಕೋತ್ಸವ ಉತ್ತಮ ವೇದಿಕೆ



• **ಮಲ್ಲಮ್ಮ ನುಡಿವಾರ್ತೆ, ಕುಕನೂರ**

ಸಮೀಪದ ಕುದರಿಮೋತಿ ಬ್ರೈಟ್ ಫ್ಯೂಚರ್ ಇಂಗ್ಲಿಷ್ ಮೀಡಿಯಂ ಸ್ಕೂಲ್ ನ 8 ನೇ ವರ್ಷದ ಶಾಲಾ ವಾರ್ಷಿಕೋತ್ಸವ ಹಾಗೂ ಶಾಲಾ ಮಕ್ಕಳ ಸಾಂಸ್ಕೃತಿಕ ವೈಭವದ ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿ ವಿಜೇತರಾದ ದೇವರೆಡ್ಡಿ ಬಿ ಮಾತನಾಡಿ ಶಾಲಾ ವಾರ್ಷಿಕೋತ್ಸವವು ವಿದ್ಯಾರ್ಥಿಗಳ ಪ್ರತಿಭೆ,ಶೈಕ್ಷಣಿಕ ಸಾಧನೆ ಮತ್ತು ಸಾಂಸ್ಕೃತಿಕ ಕೌಶಲ್ಯಗಳನ್ನು ಪ್ರದರ್ಶಿಸುವ ಒಂದು ಸಂಭ್ರಮದ ಹಬ್ಬವಾಗಿದೆ.

ಇದು ನಾಟಕ,ನೃತ್ಯ,ಗಾಯನ ಮತ್ತು ಕ್ರೀಡಾ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ,ತಂಡದ ಕೆಲಸ ಮತ್ತು ಸೃಜನಶೀಲತೆಯನ್ನು ಉತ್ತೇಜಿಸುತ್ತದೆ,ಕಳೆದ 8 ವರ್ಷಗಳ ಹಿಂದೆ ಹುಟ್ಟಿಕೊಂಡ ಶಿಕ್ಷಣ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆಯಬೇಕು ಈ ಸಂಸ್ಥೆಯಲ್ಲಿ ಓದಿದ ಮಕ್ಕಳು ನವೋದಯ ಮೊರಾರ್ಜಿ ಸೈನಿಕ,ಕಿತ್ತೂರು ರಾಣಿ ಚೆನ್ನಮ್ಮ ಇತರೆ ಸ್ಕೂಲ್ ಗೆ ಆಯ್ಕೆಯಾಗಿ ಸಾಧನೆ ಮಾಡುವ ಮೂಲಕ ಈ ಬ್ರೈಟ್ ಫ್ಯೂಚರ್ ಆಂಗ್ಲ ಮಾಧ್ಯಮ ಶಾಲೆಗೆ ಕೀರ್ತಿ ಹೆಚ್ಚಿಸಿದ್ದಾರೆ.ಇದೇ ರೀತಿ ಮುಂದಿನ ದಿನಗಳಲ್ಲಿ ಈ ಶಿಕ್ಷಣ ಸಂಸ್ಥೆ ಜಿಲ್ಲೆಯಲ್ಲೇ ಮಾದರಿ ಶಿಕ್ಷಣ ಸಂಸ್ಥೆಯಾಗಿ ಹೊರಹೊಮ್ಮಲಿ ಹಾಗೂ ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಕಡೆ ಹೆಚ್ಚಿನ ಒಲವು ತೋರಿದಾಗ ಮಾತ್ರ ಜೀವನದಲ್ಲಿ ಏನಾದರೂ ಸಾಧನೆ ಮಾಡಲು ಸಾಧ್ಯವಾಗುತ್ತದೆ. ಆದರೆ ಇತ್ತೀಚಿನ ವಿದ್ಯಾರ್ಥಿಗಳು ಕೇವಲ ಮೊಬೈಲ್ ಮತ್ತು ಟಿವಿ ನೋಡುತ್ತಾ ಕಾಲ ಕಳೆಯುತ್ತಿರುವುದು ಸರಿಯಲ್ಲ,ಅಲ್ಲದೇ ಮಕ್ಕಳ ಸುಧಾರಣೆಯಲ್ಲಿ ಕೇವಲ ಶಿಕ್ಷಕರ ಪಾತ್ರ ಅಷ್ಟೇ ಮುಖ್ಯ ಅಲ್ಲ,ಜೊತೆಗೆ ಪಾಲಕರ ಜವಾಬ್ದಾರಿ ಬಹಳಷ್ಟಿದೆ ಎಂದರು.ಕುದರಿಮೋತಿಯ ಶ್ರೀ ವಿಜಯಮಹಾಂತ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ,ಈ ಶಿಕ್ಷಣ ಸಂಸ್ಥೆಯಲ್ಲಿ ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾಗಿ ಅವರ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ವಾತಾವರಣ ಸೃಷ್ಟಿಸುವ ನಿಟ್ಟಿನಲ್ಲಿ ಶಿಕ್ಷಕ ವೃಂದ ಹಾಗೂ ಪೋಷಕ ವರ್ಗ ಶ್ರಮಿಸುತ್ತಿದ್ದಾರೆ.

ಸಂಸ್ಥೆಯ ಅಧ್ಯಕ್ಷ ಅಶೋಕ ಗಟ್ಟೆಪ್ಪನವರ್ ಹಾಗೂ ಗೌರವ ಅಧ್ಯಕ್ಷ ಮಂಜುನಾಥ ಗಟ್ಟೆಪ್ಪನವರ್ ನಿರಂತರ ಶ್ರಮದಿಂದಾಗಿ ಇಂದು ಈ ಗ್ರಾಮೀಣ ಬಡ ವಿಧ್ಯಾರ್ಥಿಗಳಿಗೆ ಅನುಕೂಲ ಆಗಬೇಕೆಂದು ಈ ಭಾಗದಲ್ಲಿ ಶಿಕ್ಷಣ ಸಂಸ್ಥೆ ಸ್ಥಾಪಿಸಿದ್ದಾರೆ ಮುಂದಿನ ದಿನಗಳಲ್ಲಿ ಈ ಸಂಸ್ಥೆ ಹೆಮ್ಮರವಾಗಿ ಬೆಳೆಯಬೇಕಾದಾರೆ ಗ್ರಾಮದ ಗುರು ಹಿರಿಯರು ಹಾಗೂ ಶಿಕ್ಷಣ ಪ್ರೇಮಿಗಳು ಸಹಕಾರ ಮತ್ತು ಸಹಾಯ ಮಾಡಿದಾಗ ಮಾತ್ರ ಈ ಸಂಸ್ಥೆ ಬೆಳೆಯುತ್ತದೆ ಎಂದರು,

ದಳಪತಿ ಹನುಮಗೌಡ ಪೊ.ಪಾಟೀಲ್ ಮಾತನಾಡಿ ನಮ್ಮ ಗ್ರಾಮದಲ್ಲಿ ಒಳ್ಳೆಯ ಶಿಕ್ಷಣ ಸಂಸ್ಥೆ ಮಾಡಿದ್ದಾರೆ ಈ ಶಾಲೆಯಲ್ಲಿ ಓದುವ ಮಕ್ಕಳ ತುಂಬಾ ಬಡವರ ಮಕ್ಕಳ ಇದ್ದು ಸಂಸ್ಥೆಯ ಅಧ್ಯಕ್ಷರು ತುಂಬಾ ಕಷ್ಟ ಪಟ್ಟು ಈ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ ಮುಂದಿನ ದಿನಗಳಲ್ಲಿ ಇನ್ನೂ ಈ ಸ್ಕೂಲ್ ನಿಂದ ನೂರಕ್ಕೆ ನೂರು ನವೋದಯ ಮೊರಾರ್ಜಿ ಸೈನಿಕ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಆಯ್ಕೆ ಆಗುತ್ತಾರೆ ಎಂದು ಹೇಳಿದರು.

ಬ್ರೈಟ್ ಫ್ಯೂಚರ್ ಆಂಗ್ಲ ಮಾದ್ಯಮ ಶಾಲೆಯ ಅಧ್ಯಕ್ಷರಾದ ವಿಜಯಕುಮಾರ್ ದಾಸರ್ ಮಾತನಾಡಿ ಕುದರಿಮೋತಿ ಗ್ರಾಮದಲ್ಲಿ ಬಡವ ಪಾಲಿಗೆ ದೇವಾಲಯ ಅದ್ರೇ ಇದೆ ಸ್ಕೂಲ್ ಏಕೆಂದರೆ ಇಲ್ಲಿಯ ಓದುವ ಮಕ್ಕಳ ತುಂಬಾ ಬಡವರ ಮಕ್ಕಳು ನನ್ನ ಗೊತ್ತಿದ್ದ ಪ್ರಕಾರ ಕುದರಿಮೋತಿ ಗ್ರಾಮದಲ್ಲಿ ಎಂದರು ಈ ಸಂಸ್ಥೆ ಯಾವಾಗ ಪ್ರಾರಂಭ ಆಯಿತು ಅವತ್ತಿನಿಂದ ಇವತ್ತಿಗೂ ಕೂಡ ಪ್ರತಿವರ್ಷ ನವೋದಯ ಮೊರಾರ್ಜಿ ಸೈನಿಕ ಎಲ್ಲಾ ವಸತಿ ಶಾಲೆಗೆ ಆಯ್ಕೆ ಆಗಿದ್ದಾರೆ ಅದರ ಜೊತೆಗೆ ನನ್ನ ಮಗಳು ಈ ವರ್ಷ ನವೋದಯಕ್ಕೆ ಆಯ್ಕೆ ಆಗಿದ್ದಾಳೆ ನನಗೆ ತುಂಬಾ ಸಂತೋಷವಾಗಿದೆ ಇದಕ್ಕೆಲ್ಲ ಕಾರಣ ಈ ಸಂಸ್ಥೆ ಅಧ್ಯಕ್ಷರು ಶಿಕ್ಷಕರು ಪಾತ್ರ ಮುಖ್ಯ ನನಗೆ ಶಾಲೆಯಲ್ಲಿ ಎಸ್ಡಿಎಮ್ಸಿ ಅಧ್ಯಕ್ಷರಾಗಿ ಮಾಡಿದ್ದಾರೆ ನಾನು ಈ ಸಂಸ್ಥೆಗೆ ಯಾವಾಗಲೂ ನನ್ನಿಂದ ಎಷ್ಟು ಸಾಧ್ಯ ಅಷ್ಟು ಸಹಾಯ ಮತ್ತು ಸಹಕಾರ ಇರುತ್ತದೆ ಈ ವರ್ಷ ಶಾಲೆಗೆ ಸಿಸಿ ಕ್ಯಾಮೆರಾವನ್ನು ದೇಣಿಗೆಯಾಗಿ ಕೊಡಿಸಿದ್ದೇನೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸಹಾಯ ಸಹಕಾರ ಇರುತ್ತದೆ ಎಂದು ಹೇಳಿದರು.

## ಬಾಲಕಾರ್ಮಿಕರ ನಿರ್ಮೂಲನೆ ಸಭೆ
# ದಾಳಿ: ಕಿಶೋರ ಕಾರ್ಮಿಕ ಮಕ್ಕಳ ರಕ್ಷಣೆ

ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ಬಾಲಕಾರ್ಮಿಕಪದ್ಧತಿಯನ್ನುನಿರ್ಮೂಲನೆಗೊಳಿಸುವ ನಿಟ್ಟಿನಲ್ಲಿ ತಾಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆ ಹಾಗೂ ದಾಳಿ/ತಪಾಸಣೆ ಕಾರ್ಯಾಚರಣೆಗಳನ್ನು ಗುರುವಾರ ಕೊಪ್ಪಳ ತಾಲೂಕಿನಲ್ಲಿ ಯಶಸ್ವಿಯಾಗಿ ನಡೆಸಲಾಯಿತು.

ಮಾನ್ಯ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ನವದೆಹಲಿ ಹಾಗೂ ಜಿಲ್ಲಾಧಿಕಾರಿಗಳ ಸೂಚನೆಯಂತೆ "PAN-INDIA Rescue & Rehabilitation Campaign of Child and Adolescent Labour" ಅಭಿಯಾನದ ಅಂಗವಾಗಿ ಕಾರ್ಯಕ್ರಮ ಆಯೋಜಿಸಲಾಯಿತು. ಮೊದಲಿಗೆ ತಾಲೂಕು ಪಂಚಾಯತ್ ಕಾರ್ಯನಿರ್ವಾಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ಸಭೆ ನಡೆಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ದುಂಡಪ್ಪ ತುರಾದಿ ಅವರು, ತಾಲೂಕಿನಾದ್ಯಂತ ಬಾಲಕಾರ್ಮಿಕರನ್ನು ಪತ್ತೆ ಮಾಡುವುದು ಎಲ್ಲಾ ಇಲಾಖೆಗಳ ಜವಾಬ್ದಾರಿ ಎಂದು ತಿಳಿಸಿದರು. ಪ್ರತಿಯೊಬ್ಬ ಅಧಿಕಾರಿಯೂ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಕೈಜೋಡಿಸಬೇಕು ಎಂದು ಸೂಚಿಸಿದರು.

ಬೇಸಿಗೆ ಸಂದರ್ಭದಲ್ಲಿ ಮಕ್ಕಳು ಹಳ್ಳಕೊಳ್ಳಗಳಲ್ಲಿ ಈಜಾಡಲು ಹೋಗುವುದು ಹಾಗೂ ದನ–ಕುರಿಗಳನ್ನು ಕಾಯುವ ಸಂದರ್ಭಗಳಲ್ಲಿ ಅಪಾಯಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚಿದೆ. ಹೀಗಾಗಿ ಸ್ಥಳೀಯ ಅಧಿಕಾರಿಗಳು, ಶಿಕ್ಷಕರು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತರು, ಗ್ರಾಮ ಪಂಚಾಯತ್ ಸದಸ್ಯರು ಮತ್ತು ಪೋಷಕರು ಹೆಚ್ಚಿನ ಜಾಗೃತಿ ವಹಿಸಬೇಕೆಂದು ಹೇಳಿದರು.

ಬಾಲಕಾರ್ಮಿಕರನ್ನು ಗುರುತಿಸಲು ನಿರಂತರ



ತಪಾಸಣೆ ನಡೆಸಬೇಕಿದ್ದು, ಕಾರ್ಮಿಕ ಇಲಾಖೆಯ ಜೊತೆಗೆ ಇತರೆ 11 ಇಲಾಖೆಗಳ ಅಧಿಕಾರಿಗಳಿಗೆ ಕಾಯಿದೆ ಕಲಂ–17ರಡಿ ನಿರೀಕ್ಷಕರಾಗಿ ಅಧಿಕಾರ ನೀಡಲಾಗಿದೆ. ಎಲ್ಲ ಅಧಿಕಾರಿಗಳೂ ತಮ್ಮ ವ್ಯಾಪ್ತಿಯಲ್ಲಿ ತಪಾಸಣೆ ನಡೆಸಬೇಕು ಎಂದು ಸೂಚಿಸಿದರು. ಸಾರ್ವಜನಿಕರಲ್ಲಿ ಅರಿವು ಮೂಡಿಸಲು 1098 ಮಕ್ಕಳ ಸಹಾಯವಾಣಿ ಸಂಖ್ಯೆಯ ಮಾಹಿತಿ ಗೋಡೆ ಬರಹಗಳನ್ನು ಸರ್ಕಾರಿ ಕಚೇರಿಗಳಲ್ಲಿ ಕಡ್ಡಾಯವಾಗಿ ಅಳವಡಿಸಲು ಸೂಚಿಸಲಾಯಿತು.

ಸಭೆಯ ನಂತರ ಕೊಪ್ಪಳ ನಗರದಲ್ಲಿ ದಾಳಿ ಹಾಗೂ ತಪಾಸಣೆ ಕಾರ್ಯಾಚರಣೆ ನಡೆಸಲಾಯಿತು. ವಿವಿಧ ಹೋಟೆಲ್, ಗ್ಯಾರೇಜ್, ಬೇಕರಿ ಹಾಗೂ ಅಂಗಡಿಗಳಲ್ಲಿ ಪರಿಶೀಲನೆ ನಡೆಸಿ, ಕರಪತ್ರಗಳನ್ನು ಹಂಚಿ ಜಾಗೃತಿ ಮೂಡಿಸಲಾಯಿತು. 18 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳಬಾರದೆಂದು ಮಾಲೀಕರಿಗೆ ಎಚ್ಚರಿಕೆ ನೀಡಲಾಯಿತು.

ಕಾರ್ಯಾಚರಣೆಯಲ್ಲಿ ಕಾರ್ಮಿಕ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ನಗರಸಭೆ, ಪೊಲೀಸ್ ಇಲಾಖೆ, ಮಕ್ಕಳ ಸಹಾಯವಾಣಿ 1098 ಸಿಬ್ಬಂದಿ, ಮಹಿಳಾ ಸಾಂತ್ವನ ಕೇಂದ್ರ ಹಾಗೂ ವಿವಿಧ ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದರು.

ಈ ವೇಳೆ ನಗರದ "ಮಾಜಿಸಾ ಕಲೆಕ್ಷನ್" ಬಟ್ಟೆ ಅಂಗಡಿಯಲ್ಲಿ ಒಬ್ಬ ಕಿಶೋರ ಕಾರ್ಮಿಕ ಪತ್ತೆಯಾಗಿದ್ದು, ಆತನನ್ನು ರಕ್ಷಿಸಿ ಮುಂದಿನ ಪೋಷಣೆ ಹಾಗೂ ಪುನರ್ವಸತಿಗಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಲಾಗಿದೆ ಎಂದು ಕಾರ್ಮಿಕ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

# ಇಂದು ಬಸವ ದರ್ಶನ ಪ್ರವಚನ ಉದ್ಘಾಟನೆ



• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ,**

ಇಲ್ಲಿಯ ಚನ್ನಬಸವಾಶ್ರಮ ಪರಿಸರದಲ್ಲಿ ವಿಶ್ವಗುರು ಬಸವಣ್ಣನವರ ಜಯಂತಿ, ವಚನ ಜಾತ್ರೆ–2026, ಡಾ.ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೋತ್ಸವ ಮತ್ತು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ನಿಮಿತ್ತ ಬುಧವಾರ ಸಾಯಂಕಾಲ 5.30 ಗಂಟೆಗೆ ಬಸವ ದರ್ಶನ ಪ್ರವಚನ ಉದ್ಘಾಟನೆಗೊಳ್ಳಲಿದೆ.

ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಹಂದಿಗುಂದ ಸಿದ್ದೇಶ್ವರ ಮಠದ ಶಿವಾನಂದ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ತಳವಾಡೆ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ.ಶೈಲಜಾ ಡಾ.ಅನಿಲಕುಮಾರ ತಳವಾಡೆ ಅವರು ಬಸವ ದರ್ಶನ ಪ್ರವಚನ ಉದ್ಘಾಟಿಸಲಿದ್ದಾರೆ. ಹಿರಿಯ ಮುಖಂಡ ಸುಭಾಷ ಕಾರಾಮುಂಗೆ ಅಧ್ಯಕ್ಷತೆ ವಹಿಸಲಿದ್ದಾರೆ. ಯುವ ಮುಖಂಡ ಪ್ರಸನ್ನ ಪ್ರಕಾಶ ಖಂಡ್ರೆ ಬಸವ ಗುರುವಿನ ಪೂಜೆ ನೆರವೇರಿಸಲಿದ್ದಾರೆ. ಪತ್ರಕರ್ತರ ಸಂಘದ ಅಧ್ಯಕ್ಷ ಜಯರಾಜ ದಾಬಶೆಟ್ಟೆ, ಡಾ.ಪ್ರೇರಣಾ ಡಾ.ಸಚಿನ ಎಡವೆ, ಪಂಕಜಾ ಶಿವು ಲೋಖಂಡೆ, ರೇಖಾ ಮಹಾಜನ್, ದೀಪಕ ಠಮಕೆ ಸೇರಿದಂತೆ ಮುಂತಾದವರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಮದ್ಯ ಬೆಲೆ ಏರಿಕೆಯಿಂದ ಯುವಕರು ವಿದ್ಯಾರ್ಥಿಗಳು ಗಾಂಜಾ ಸೇವನೆಗೆ ಬಲಿಯಾಗುತ್ತಿದ್ದಾರೆ : ವಿಶ್ವನಾಥ್

• **ಮಲ್ಲಮ್ಮ ನುಡಿ ವಾರ್ತೆ ಪಿರಿಯಾಪಟ್ಟಣ**

ರಾಜ್ಯದಲ್ಲಿ ಮದ್ಯ ಬೆಲೆ ಏರಿಕೆಯಿಂದ ಯುವಕರು ವಿದ್ಯಾರ್ಥಿಗಳು ಗಾಂಜಾ ಸೇವನಿಗೆ ಮಾರಿ ಹೋಗುತ್ತಿದ್ದಾರೆ ಎಂದು ವಿದನ ಪರಿಷತ್ ಸದಸ್ಯ ಎಚ್ ವಿಶ್ವನಾಥ್ ಕಳವಳ ವ್ಯಕ್ತಪಡಿಸಿದರು.

ತಾಲೂಕಿನ ಕೊಪ್ಪ ಗ್ರಾಮದ ಹೋಟೆಲ್ ಮಿನಿಸ್ಟರ್ ಕೋರ್ಟ್ ಸಭಾಂಗಣದಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ಅಹಿಂಧ ರೈತ ಸಂಘ (ರಿ) ವತಿಯಿಂದ ಏರ್ಪಡಿಸಿದ್ದ ನೂತನ ಶಾಖೆ ಉದ್ಘಾಟನೆ ಮತ್ತು ದೀಕ್ಷಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ರವರ ತವರು ಜಿಲ್ಲೆಯಾದ ಮೈಸೂರಿನಲ್ಲಿ ಸುಮಾರು 1 ಸಾವಿರ ಕೋಟಿ ರೂ ಬೆಲೆಬಾಳುವ ಡ್ರಗ್ಸ್ ನ್ನು ಹೊರ ರಾಜ್ಯ ಪೊಲೀಸರು ಪತ್ತೆ ಮಾಡಿದ್ದಾರೆ.

ಆದರೆ ರಾಜ್ಯ ಪೊಲೀಸ್ ಅಧಿಕಾರಿಗಳು ಆಸೆ ಆವೇಶಕ್ಕೆ ಒಳಗಾಗಿ ಅದನ್ನು ಬಿಟ್ಟುಕೊಂಡಿದ್ದರು ಈ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಿ ಮಧ್ಯದರವನ್ನು ಇಳಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯರವರಿಗೆ ಸಲಹೆ ನೀಡಿರುವುದಾಗಿ ಪ್ರಸ್ತಾಪಿಸಿದರು. ದುಡಿಯುವ ವರ್ಗಕ್ಕೆ ಉದ್ಯೋಗ ದೊರಕಿಸುವುದನ್ನು ಬಿಟ್ಟು ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಆರ್ಥಿಕ ದಿವಾಳಿ ಆಗುವಂತೆ ಮಾಡಿರುವುದು ಸರಿಯಲ್ಲ ಸಾರ್ವಜನಿಕ ಹಣವನ್ನು ನಿಮ್ಮ ಇಚ್ಚಾ ಪ್ರಕಾರ ಹಣ ಖರ್ಚು ಮಾಡುವ ಅಧಿಕಾರ ಕೊಟ್ಟವರು ಯಾರು ಎಂದು ಪ್ರಶ್ನಿಸಿದರು. ಸಾರ್ವಜನಿಕವಾಗಿ ನೀಡಬೇಕಾದ ಮೂಲಭೂತ ಸೌಲಭ್ಯದಲ್ಲಿ ಪಕ್ಷಪಾತ ಮಾಡಿದರೆ ಅದು ರಾಜದ್ರೋಹದ ಕೆಲಸವಾಗಿರುತ್ತದೆ ದಿ ಡಿ. ದೇವರಾಜ ಅರಸ್ ರವರ ಮಾರ್ಗದರ್ಶನದಲ್ಲಿ ನಡೆದಿದ್ದು ಬದ್ಧತೆಯ ರಾಜಕಾರಣವನ್ನು ತಮಗೆ ಕಲಿಸಿ ಹೋಗಿರುವ ಬಗ್ಗೆ ಹೆಮ್ಮೆ ಇದೆ ಎಂದರು. ಭೂ ಸುಧಾರಣೆ ಕಾಯ್ದೆ ಅಡಿಯಲ್ಲಿ ಡಿ ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದಾಗ 21 ಲಕ್ಷ ಎಕರೆ ವಿಸ್ತೀರ್ಣವನ್ನು ಬಡವರಿಗೆ ಹಂಚಿದ್ದಾರೆ ಇದ–ರಿಂದ ಎಷ್ಟು ತಲೆಮಾರು ನಿಂದ ದುಡಿದು ಅನ್ನ ನೀಡುವ ಅವಕಾಶವನ್ನು ಕಲ್ಪಿಸಿದ್ದಾರೆ. ಅದೇ ರೀತಿ ಅಕ್ಷರ ಮತ್ತು ದುಡಿಮೆ ನೀಡಿದವರ ಜೊತೆಗೆ ಬದುಕನ್ನು ರೂಪಿಸುವ ಯೋಜನೆಗಳನ್ನು ಸರ್ಕಾರ ನೀಡಬೇಕೆ ವಿನಹ ಜನರ ಹಣವನ್ನು ಹಾಳು ಮಾಡುವುದಕಲ್ಲ ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.



ಯಾವುದೇ ಸಂಘಗಳು ರಾಜಕೀಯ ಚುನಾವಣೆಯನ್ನು ಪ್ರವೇಶಿಸದೆ ಬಲ ವರ್ಧನೆಯ ಬಗ್ಗೆ ಯಶಸ್ವಿ ಕಾಣಲು ಸಾಧ್ಯ ಈ ನಿಟ್ಟಿನಲ್ಲಿ ಅಹಿಂದ ರೈತ ಸಂಘ ರಾಜ್ಯದಲ್ಲಿ ಉತ್ತಮ ಕೆಲಸ ನಿರ್ವಹಿಸಲಿ ಎಂದು ಶುಭ ಹಾರೈಸಿದರು.

ಸಂಘದ ರಾಜ್ಯಾಧ್ಯಕ್ಷ ಸೋಮನಹಳ್ಳಿ ಶಿವಶಂಕರ್ ಮಾತನಾಡಿ ಹುಣಸೂರು ಉಪವಿಭಾಗವನ್ನು ಜಿಲ್ಲೆಯಾಗಿ ಮಾಡಬೇಕು ಹಾಗೂ ರಾಜ್ಯ ರಾಜಕಾರಣದಲ್ಲಿ ಮಹಿಳೆಯರಿಗೆ ಶೇಕಡ 50ರಷ್ಟು ಅವಕಾಶ ನೀಡಬೇಕು ಹಾಗೂ ಗ್ರಾಮ ಪಂಚಾಯಿತಿ ಮಾದರಿಯಲ್ಲಿ ಮೀಸಲಾತಿಯನ್ನು ವಿಧಾನಸಭಾ ಚುನಾವಣೆಯಲ್ಲಿ ಜಾರಿಗೆ ತರಬೇಕು ಎಂಬುವುದನ್ನು ಸೇರಿದಂತೆ 5 ಹಕ್ಕುಗಳನ್ನು ಮಂಡಿಸಿದರು.

ಈ ಸಂದರ್ಭದಲ್ಲಿ ಮುಖ್ಯ ಭಾಷಣಕಾರಾಗಿ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಲೋಕೇಶ್ ಸಾಗರ್ ಮತ್ತು ದರ್ಕಾಸ್ತು ಕಮಿಟಿ ಸದಸ್ಯ ಟಿ ಈರಯ್ಯ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ವಾಸುದೇವ್ ರಡ್ಡಿ ಮಾತನಾಡಿದರು.

ಭೂಪಯ್ಯ. ಭರತ್ ಅರಸ್. ಫ್ರಾನ್ಸಿಸ್. ಆರ್ಥಿ ಶಿವಪ್ಪ. ಭಾರವಿ ಬ್ರದರ್ಸ್ ರವರನ್ನು ಸನ್ಮಾನಿಸಲಾಯಿತು. ಸಂಘದ ರಾಜ್ಯ ಉಪಾಧ್ಯಕ್ಷ ನವಿಲೂರು ಚೆನ್ನಪ್ಪ. ಮಹಿಳಾ ರಾಜ್ಯ ಅಧ್ಯಕ್ಷೆ ಉಮಕ್ಷಿ ಗೌಡ. ರಾಜ್ಯ ಮಹಿಳಾ ಉಪಾಧ್ಯಕ್ಷೆ ದಿವ್ಯಜೋತಿ. ರಾಜ್ಯ ಕಾರ್ಯದರ್ಶಿ ಬೆಮ್ಮತ್ತಿ ಚಂದ್ರು. ಜಿಲ್ಲಾಧ್ಯಕ್ಷ ಸುಜಾತ ಮಡಿವಾಳ ಸಂಘದ ತಾಲೂಕು ಗೌರವಾಧ್ಯಕ್ಷ ಕೃಷ್ಣ ಶೆಟ್ಟಿ. ಕಾವೇರಿ ಆಸ್ಪತ್ರೆ ಮುಖ್ಯಸ್ಥ ಡಾ. ಲೋಹಿತ್ ಪರಿಸರ ಪ್ರೇಮಿ ದೇವಿ ಕುಮಾರ್. ಗ್ರಾಪಂ ಮಾಜಿ ಅಧ್ಯಕ್ಷ ಕೆ ವಿಜಯ್ ಕುಮಾರ್ ಮತ್ತಿತರರು ಹಾಜರಿದ್ದರು.

# ವಿವಿಧ ಕಾಮಗಾರಿಗಳಿಗೆ ಶಾಸಕರಿಂದ ಚಾಲನೆ

• **ಮಲ್ಲಮ್ಮ ನುಡಿ ವಾರ್ತೆ ಮುದಗಲ್**

ಸಮೀಪದ ಹೂನೂರು ಗ್ರಾಪಂ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ವಿವಿಧ ಕಾಮಗಾರಿಗಳಿಗೆ ಲಿಂಗಸುಗೂರು ಶಾಸಕ ಮಾನಪ್ಪ ಡಿ ವಜ್ಜಲ್ ಸೋಮವಾರ ಚಾಲನೆ ನೀಡಿದರು.

ಮಾಕಾಪೂರು, ಹೂನೂರು, ತುರಡಗಿ, ಆರ್ಯ ಭೋಗಾಪೂರು, ವಂದಲಿ, ಕೋಮಲಾಪುರ ಗ್ರಾಮದಲ್ಲಿ ಕೆಕೆಆರ್ ಡಿಬಿಯ 2025–26ನೇ ಸಾಲಿನ ಅನುದಾನದಲ್ಲಿ ಪ್ರತಿ ಗ್ರಾಮಕ್ಕೆ ತಲಾ 50ಲಕ್ಷ,ರೂ ಮೊತ್ತದ ಸಿಸಿ ರಸ್ತೆ ಕಾಮಗಾರಿ. 2025–26ನೇ ಸಾಲಿನ ಸಿಎಂ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಕನಸಾವಿ, ರಾಮತ್ನಾಳ ಗ್ರಾಮದಲ್ಲಿ ತಲಾ 50ಲಕ್ಷ,ರೂ ಅನುದಾನದಲ್ಲಿ ಸಿಸಿ ರಸ್ತೆ ಕಾಮಗಾರಿ.

2024–25ನೇ ಸಾಲಿನ ಆರ್ಯಭೋಗಾಪುರ ಗ್ರಾಮದಲ್ಲಿ ಎಂಎ□□□ ಲ್ಯಾಡ್ 5ಲಕ್ಷ,ರೂ ಅನುದಾನ ದಲ್ಲಿ ಶ್ರೀ ದುರ್ಗಾದೇವಿ ದೇವಸ್ಥಾನ ಅಭಿವೃದ್ಧಿ ಕಾಮಗಾರಿ. 2024–25ನೇ ಸಾಲಿನ ಕೆ–ಕೆಆರ್ ಡಿಬಿ ಅನುದಾನದಲ್ಲಿ ರಾಮತ್ನಾಳ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ 50ಲಕ್ಷ,ರೂ ಮೊತ್ತದಲ್ಲಿ ಹೆಚ್ಚುವರಿ 4 ಕೊಠಡಿ ನಿರ್ಮಾಣ ಮತ್ತು 25ಲಕ್ಷ,ರೂ ಅನುದಾನದಲ್ಲಿ ಶ್ರೀ ಅನ್ನದಾನೇಶ್ವರ ಸಮುದಾಯ ಭವನ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದರು.

ಮುದಗಲ್ ಪಟ್ಟಣದಲ್ಲಿ ಕುಡಿಯುವ ನೀರಿನ ಸೌಲಭ್ಯಕ್ಕೆ 1ಕೋ,ರೂ ನೀಡುತ್ತೇನೆ. ಅನ್ನದಾನೇಶ್ವರ ಮಠದ ಅಭಿವೃದ್ಧಿಗೆ ಸಹಕರಿಸುವೆ. ಸಿಎಂ ಸಿದ್ಧರಾಮಯ್ಯ ಸರಕಾರದಿಂದ ಮುದಗಲ್ ತಾಲೂಕು ರಚನೆ, ಕುಡಿಯುವ ನೀರಿನ ಅನುದಾನಕ್ಕಾಗಿ ಯಾವುದೇ ಸ್ಪಂದನೆ ಸಿಗಲಿಲ್ಲ. ಗ್ಯಾರಂಟಿ ಯೋಜನೆಗಳಿಂದ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗಿದೆ. ಸರಕಾರ ಸಾಲದ ಸುಳಿಯಲ್ಲಿ ಸಿಲುಕಿದೆ. ಸರಕಾರದ ನಡೆಗೆ ಜನರಲ್ಲಿ ಬೇಸರ ವ್ಯಕ್ತವಾಗಿದೆ. 2028ಕ್ಕೆ ರಾಜ್ಯದಲ್ಲಿ ಬಿಜೆಪಿ ಸರಕಾರ ಬರುತ್ತದೆ ಎಂದು ಹೇಳಿದರು.

ರಾಮತ್ನಾಳ ಅನ್ನದಾನೇಶ್ವರ ಮಠದ ಪೂಜ್ಯರಾದ ಮುಪ್ಪಿನ ಬಸವಲಿಂಗ ಸ್ವಾಮೀಜಿ, ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಪಾಟೀಲ ಲೆಕ್ಕಿಹಾಳ, ಮುದಗಲ್ ಮಂಡಲ ಅಧ್ಯಕ್ಷ ಹುಲ್ಲೇಶ ಸಾಹುಕಾರ, ರುದ್ರಗೌಡ ತುರುಡಗಿ, ಚಂದ್ರಶೇಖರ ಮಡಿವಾಳರ ಮಾತನಾಡಿದರು.

ಲಿಂಗಣ್ಣ ದೇವಕರಿ, ಕರಿಯಪ್ಪ ಯಾದವ್, ಉದಯಕುಮಾರ ಕಮ್ಮಾರ, ಮಲ್ಲಪ್ಪ ಮಾಟೂರು, ಶರಣಪ್ಪ ಜಾಧವ್, ಮುತ್ತಣ್ಣ ಮಾಕಾಪೂರು, ನಾಗರಾಜ ತಳವಾರ, ಶೇಖರಗೌಡ, ಚಂದಾವಲಿ ಜಂಗ್ಲಿ, ಶ್ರೀಶೈಲಗೌಡ ಹಾಗೂ ಇತರರು ಇದ್ದರು.

# ಹೆಣ್ಣು ಅಂದು ಅಬಲೆ, ಇಂದು ಸಬಲೆ; ಶೋಷಣೆ ಮಾತ್ರ ದಿನನಿತ್ಯ

## ಆದರ್ಶ ಮತ್ತು ವಾಸ್ತವದ ಸಂಘರ್ಷ

ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ ಎಂಬ ಸುಭಾಷಿತವು ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಗೆ ನೀಡಲಾದ ದೈವೀ ಸ್ಥಾನವನ್ನು ಎತ್ತಿ ಹಿಡಿಯುತ್ತದೆ. ಆದರೆ, ಸಾವಿರಾರು ವರ್ಷಗಳ ಇತಿಹಾಸವನ್ನು ಗಮನಿಸಿದಾಗ, ಈ ಗೌರವವು ಕೇವಲ ಶ್ಲೋಕಗಳಿಗೆ ಮತ್ತು ಪೂಜಾ ವಿಧಿಗಳಿಗೆ ಸೀಮಿತವಾಗಿದೆಯೇ ಎಂಬ ಆತಂಕಕಾರಿ ಪ್ರಶ್ನೆ ಎದುರಾಗುತ್ತದೆ. ಅನಾಧಿಕಾಲದಿಂದಲೂ ಹೆಣ್ಣು ತನ್ನ ಅಸ್ತಿತ್ವ, ಅಸ್ಮಿತೆ ಮತ್ತು ಮೂಲಭೂತ ಹಕ್ಕುಗಳಿಗಾಗಿ ನಿರಂತರವಾಗಿ ಹೋರಾಡುತ್ತಲೇ ಬಂದಿದ್ದಾಳೆ.

**ಇತಿಹಾಸದ ಕರಾಳ ನೆರಳು ಮತ್ತು ಸುಧಾರಣೆಯ ಹಾದಿ**

ಜಗತ್ತಿನ ಶ್ರೇಷ್ಠ ಚಿಂತಕ ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಒಂದು ಹಕ್ಕಿ ಒಂದೇ ರೆಕ್ಕೆಯಿಂದ ಹಾರಲಾರದು, ಹಾಗೆಯೇ ಮಹಿಳೆಯರ ಉದ್ಧಾರವಾಗದೆ ಜಗತ್ತಿನ ಕಲ್ಯಾಣ ಸಾಧ್ಯವಿಲ್ಲ." ಆದರೆ ಸಮಾಜವು ಧರ್ಮ ಮತ್ತು ಸಂಪ್ರದಾಯದ ಹೆಸರಿನಲ್ಲಿ ಮಹಿಳೆಯ ಒಂದು ರೆಕ್ಕೆಯನ್ನು ಕತ್ತರಿಸುವ ಕೆಲಸವನ್ನು ನಿರಂತರವಾಗಿ ಮಾಡಿದೆ. ಪಿಡುಗುಗಳ ಸರಪಳಿ: ಸತಿ ಪದ್ಧತಿ, ಬಾಲ್ಯ ವಿವಾಹ ಮತ್ತು ದೇವದಾಸಿ ಪದ್ಧತಿಗಳಂತಹ ಅನಿಷ್ಟಗಳು ಹೆಣ್ಣಿನ ಬೆಳವಣಿಗೆಯನ್ನು ಕುಂಠಿತಗೊಳಿಸಿದವು. ರಾಜಾ ರಾಮ ಮೋಹನ್ ರಾಯ್ ಮತ್ತು ಈಶ್ವರಚಂದ್ರ ವಿದ್ಯಾಸಾಗರರಂತಹ ಮಹಾಪುರುಷರ ಹೋರಾಟದಿಂದ ಇವುಗಳಿಗೆ ಕಾನೂನುಬದ್ಧ ಕಡಿವಾಣ ಬಿದ್ದರೂ, ಇವುಗಳ ಮಾನಸಿಕ ಪ್ರಭಾವ ಇಂದಿಗೂ ಸಮಾಜದ ಕೆಲವು ಸ್ತರಗಳಲ್ಲಿ ಉಳಿದುಕೊಂಡಿದೆ.

ಸಮಕಾಲೀನ ಸವಾಲುಗಳು: ಶೋಷಣೆಯ ಹೊಸ ರೂಪಗಳು ಇಂದು ಮಹಿಳೆ ವಿಜ್ಞಾನ, ಕ್ರೀಡೆ, ರಾಜಕೀಯ ಹಾಗೂ ಬಾಹ್ಯಾಕಾಶ ಕ್ಷೇತ್ರದಲ್ಲೂ ತನ್ನ ಮುದ್ರೆಯನ್ನು ಒತ್ತಿದ್ದಾಳೆ. ಆದರೂ ಆಕೆಯ ಮೇಲಿನ ಶೋಷಣೆಯ ಸ್ವರೂಪ ಬದಲಾಗಿದೆಯೇ ಹೊರತು ಸಂಪೂರ್ಣವಾಗಿ ಮಾಯವಾಗಿಲ್ಲ.

ಭ್ರೂಣ ಹತ್ಯೆ: ಆಧುನಿಕ ತಂತ್ರಜ್ಞಾನವನ್ನು ಬಳಸಿ ಹೆಣ್ಣು ಎಂಬ ಕಾರಣಕ್ಕೆ ಗರ್ಭದಲ್ಲೇ ಅವಳ ಜೀವದೀಪ ಆರಿಸುವ ಕ್ರೌರ್ಯ ಇಂದಿಗೂ ನಡೆಯುತ್ತಿದೆ. 2011ರ ಜನಗಣತಿಯ ಪ್ರಕಾರ ಭಾರತದಲ್ಲಿ ಪ್ರತಿ 1000 ಪುರುಷರಿಗೆ ಕೇವಲ 943 ಮಹಿಳೆಯರಿರುವುದು ಈ ಅಸಮತೋಲನಕ್ಕೆ ಸಾಕ್ಷಿ. ವರದಕ್ಷಿಣೆ ಎಂಬ ಪಿಡುಗು: ಮಹಾತ್ಮ ಗಾಂಧೀಜಿಯವರು ಹೇಳಿದಂತೆ, ಯಾವ ಪುರುಷ ವರದಕ್ಷಿಣೆಯನ್ನು ವಿವಾಹದ ಶರತ್ತನ್ನಾಗಿ ಮಾಡುತ್ತಾನೋ, ಅವನು ತನ್ನ ಶಿಕ್ಷಣಕ್ಕೆ ಮತ್ತು ತನ್ನ ದೇಶಕ್ಕೆ ದ್ರೋಹ ಬಗೆಯುತ್ತಾನೆ." ಆದರೆ ಇಂದಿಗೂ ಹಣಕ್ಕಾಗಿ ಹೆಣ್ಣುಮಕ್ಕಳು ಅತ್ತೆಮನೆಯ ಕಿರುಕುಳಕ್ಕೆ ಬಲಿಯಾಗುತ್ತಿದ್ದಾರೆ.

ಸೈಬರ್ ಅಪರಾಧ: ಸಾಮಾಜಿಕ ಜಾಲತಾಣಗಳಲ್ಲಿ ಹೆಣ್ಣನ್ನು ಅಶ್ಲೀಲವಾಗಿ ಬಿಂಬಿಸುವುದು ಮತ್ತು ಡಿಜಿಟಲ್ ಕಿರುಕುಳ ನೀಡುವುದು ಇಂದಿನ ಕಾಲದ ಹೊಸ ಶೋಷಣೆಯಾಗಿದೆ.

ಕೌಟುಂಬಿಕ ಹಿಂಸೆ: ನಾಲ್ಕು ಗೋಡೆಗಳ ನಡುವಿನ ಮೌನ ರೋಧನೆ ಮಹಿಳೆಯರ ಮೇಲಿನ ಶೋಷಣೆಗಳಲ್ಲಿ ಅತ್ಯಂತ ಭೀಕರವಾದುದೆಂದರೆ ಅದು ಕೌಟುಂಬಿಕ ಹಿಂಸೆ. ಮನೆಯೇ ಮೊದಲ ಪಾಠಶಾಲೆ ಎನ್ನುತ್ತಾರೆ, ಆದರೆ ಅನೇಕ ಹೆಣ್ಣುಮಕ್ಕಳಿಗೆ ಅದೇ ಮನೆಯೇ ಒಂದು ಕಾರಾಗೃಹವಾಗಿ ಮಾರ್ಪಟ್ಟಿದೆ.ಮಾನಸಿಕ ಮತ್ತು ದೈಹಿಕ ಹಿಂಸೆ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (NFHS) ಪ್ರಕಾರ, ಭಾರತದಲ್ಲಿ ಪ್ರತಿ ಮೂವರು ಮಹಿಳೆಯರಲ್ಲಿ ಒಬ್ಬರು ಕೌಟುಂಬಿಕ ಹಿಂಸೆಯನ್ನು ಎದುರಿಸುತ್ತಿದ್ದಾರೆ. ಕೇವಲ ದೈಹಿಕ ಹಲ್ಲೆ ಮಾತ್ರವಲ್ಲದೆ, ನಿರಂತರ ಅವಮಾನ, ಸಂಶಯ ಮತ್ತು ಆರ್ಥಿಕ ನಿರ್ಬಂಧಗಳ ಮೂಲಕ ಅವಳ ಆತ್ಮವಿಶ್ವಾಸವನ್ನು ಕುಗ್ಗಿಸಲಾಗುತ್ತಿದೆ.

ಮೌನದ ಸಂಕೋಲೆ: ಸಮಾಜದ ಗೌರವಕ್ಕೆ ಧಕ್ಕೆ ಬರಬಾರದೆಂಬ ಕಾರಣಕ್ಕೆ ಅಥವಾ ಮಕ್ಕಳ ಭವಿಷ್ಯಕ್ಕಾಗಿ ಲಕ್ಷಾಂತರ ಮಹಿಳೆಯರು ಇಂದಿಗೂ ಈ ನೋವನ್ನು ಮೌನವಾಗಿ ಸಹಿಸುತ್ತಿದ್ದಾರೆ. ಇದು ಅವರ ಮಾನಸಿಕ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ.

ಅಂಕಿ–ಅಂಶಗಳ ಕನ್ನಡಿ (NCRB ªÀgÀ¢)

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಓಅಖಃ) ಇತ್ತೀಚಿನ ವರದಿಯ ಪ್ರಕಾರ:


ಭಾರತದಲ್ಲಿ ಮಹಿಳೆಯರ ವಿರುದ್ಧದ ಅಪರಾಧಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ನೋಂದಾಯಿತ ಪ್ರಕರಣಗಳಲ್ಲಿ ಶೇ. 30ಕ್ಕೂ ಹೆಚ್ಚು ಪ್ರಕರಣಗಳು ಪತಿ ಅಥವಾ ಸಂಬಂಧಿಕರಿಂದ ನಡೆಯುವ ದೌರ್ಜನ್ಯಗಳೇ ಆಗಿವೆ. ದುರಂತವೆಂದರೆ, ಇಂದಿಗೂ ಅನೇಕ ಪ್ರಕರಣಗಳು ಪೊಲೀಸ್ ಠಾಣೆಯ ಮೆಟ್ಟಿಲೇರುತ್ತಿಲ್ಲ. ಪರಿಹಾರದ ಹಾದಿ ಮತ್ತು ಮಹಿಳಾ ಸಬಲೀಕರಣ: ಡಾ. ಬಿ.ಆರ್. ಅಂಬೇಡ್ಕರ್ ಅವರು ಹೇಳುತ್ತಾರೆ: ಒಂದು ಸಮುದಾಯದ ಪ್ರಗತಿಯನ್ನು ನಾನು ಆ ಸಮುದಾಯದ ಮಹಿಳೆಯರು ಸಾಧಿಸಿದ ಪ್ರಗತಿಯ ಆಧಾರದ ಮೇಲೆ ಅಳೆಯುತ್ತೇನೆ. ದೇಶದ ನಿಜವಾದ ಪ್ರಗತಿಯಾಗಬೇಕಾದರೆ ಮಹಿಳೆಯರಿಗೆ ಈ ಕೆಳಗಿನ ಸೌಲಭ್ಯಗಳು ಸಿಗಲೇಬೇಕು: ಶಿಕ್ಷಣವೇ ಮಹಾ ಶಕ್ತಿ: ಹೆಣ್ಣುಮಕ್ಕಳಿಗೆ ಉನ್ನತ ಶಿಕ್ಷಣ ನೀಡುವುದು ಅವರನ್ನು ಆರ್ಥಿಕವಾಗಿ ಸ್ವತಂತ್ರರನ್ನಾಗಿ ಮಾಡುತ್ತದೆ. ಜಾಗೃತಿ ಮತ್ತು ಕಾನೂನು ಅರಿವು: ಮಹಿಳೆಯರಿಗೆ ತಮ್ಮ ಹಕ್ಕುಗಳ ಬಗ್ಗೆ, ವಿಶೇಷವಾಗಿ 'ಕೌಟುಂಬಿಕ ಹಿಂಸೆ ತಡೆ ಕಾಯ್ದೆ–2005' ಮತ್ತು ಮಹಿಳಾ ಸಹಾಯವಾಣಿ (1091/181) ಬಗ್ಗೆ ಅರಿವು ಇರಬೇಕು.

ದೃಷ್ಟಿಕೋನ ಬದಲಾವಣೆ: ಸಮಾಜವು ಹೆಣ್ಣನ್ನು ಭೋಗದ ವಸ್ತುವಾಗಿ ನೋಡದೆ, ಒಬ್ಬ ಸ್ವತಂತ್ರ ವ್ಯಕ್ತಿಯಾಗಿ ಗೌರವಿಸಬೇಕು. ಈ ಬದಲಾವಣೆ ಮನೆಯಿಂದಲೇ ಆರಂಭವಾಗಬೇಕು. ಈ ಸಂದರ್ಭದಲ್ಲಿ 17ನೇ ಶತಮಾನದ ಕನ್ನಡದ ಖ್ಯಾತ ಕವಯಿತ್ರಿ ಸಂಚಿ ಹೊನ್ನಮ್ಮ ಬರೆದ ಸಾಲುಗಳು ಇಂದಿಗೂ ಪ್ರಸ್ತುತವಾಗಿವೆ: ಹೆಣ್ಣಲ್ಲವೇ ನಮ್ಮನೆಲ್ಲ ಪಡೆದ ತಾಯಿ, ಹೆಣ್ಣಲ್ಲವೇ ನಮ್ಮನು ಸಾಕಿದವಳು, ಹೆಣ್ಣು ಹೆಣ್ಣೆಂದೇಕೆ ಬಯ್ಯುವಿರಿ, ಹೆಣ್ಣಿಲ್ಲದ ಜಗವು ಶೂನ್ಯವಲ್ಲವೇ, ಹೊನ್ನಮ್ಮನ ಈ ಪ್ರಶ್ನೆ ಇಂದಿನ ಆಧುನಿಕ ಸಮಾಜಕ್ಕೂ ಅನ್ವಯಿಸುತ್ತದೆ. ಹೆಣ್ಣನ್ನು ಕೀಳಾಗಿ ಕಾಣುವ ಮನಸ್ಥಿತಿ ಅಂದೂ ಇತ್ತು, ಇಂದೂ ರೂಪಾಂತರಗೊಂಡು ಜೀವಂತವಾಗಿದೆ. ಹೆಣ್ಣು ಎಂದರೆ ಶಕ್ತಿಯ ರೂಪ, ತಾಳ್ಮೆಯ ಸಾಕಾರ. ಅವಳಿಗೆ ಬೇಕಿರುವುದು ಮರುಕವಲ್ಲ, ಮುಕ್ತವಾಗಿ ಬದುಕುವ ಹಕ್ಕು. ಸಮಾಜವು ಅವಳನ್ನು 'ಪೂಜಿಸುವುದು' ಬೇಡ, ಕನಿಷ್ಠಪಕ್ಷ ಒಬ್ಬ 'ಮನುಷ್ಯ'ಳಾಗಿ ಗೌರವಿಸಿದರೆ ಸಾಕು. ಶೋಷಣೆ ಮುಕ್ತ ಸಮಾಜ ನಿರ್ಮಾಣವಾದಾಗ ಮಾತ್ರ ನಾವು ನಿಜವಾದ ಸ್ವಾತಂತ್ರ್ಯವನ್ನು ಸಂಭ್ರಮಿಸಲು ಸಾಧ್ಯ.



**ಬರಹಗಾರರು:**
**ಯಲ್ಲಪ್ಪ ಶಿಕ್ಷಕರು ಜಿನಕೇರಾ.ತಾ.ಜಿ. ಯಾದಗಿರಿ**

# ಭರತ್ ಕಂದಕೂರಗೆ ಪ್ರಶಸ್ತಿ



• **ಮಲ್ಲಮ್ಮ ನುಡಿವಾರ್ತೆ ಕೊಪ್ಪಳ**

ಬೆಂಗಳೂರು ಫೋಟೋಗ್ರಾಫಿಕ್ ಕ್ಲಬ್ ಆಯೋಜಿಸಿದ್ದ 'ಕರ್ನಾಟಕದ ಜಾತ್ರೆ ಮತ್ತು ಉತ್ಸವಗಳು' ಕುರಿತ ಛಾಯಾಚಿತ್ರ ಸ್ಪರ್ಧೆಯಲ್ಲಿ ಕೊಪ್ಪಳದ ಛಾಯಾಗ್ರಹಕ ಭರತ್ ಕಂದಕೂರ ಅವರಿಗೆ ಬಹುಮಾನ ಲಭಿಸಿದೆ.

ದೊಡ್ಡಬಳ್ಳಾಪುರದ ಸುಧೀರ್ ಭಜನೆ ಹಟ್ಟಿ ಅವರ ಕೊಪ್ಪಳದ ಗವಿಸಿದ್ದೇಶ್ವರ ಜಾತ್ರೆ ಚಿತ್ರ (ಪ್ರಥಮ ಸ್ಥಾನ),

ದೊಡ್ಡಬಳ್ಳಾಪುರದ ಬಿ.ಎನ್.ಉಮಾಶಂಕರ್ ಅವರ ಗೋಕಾಕದ ಭಂಡಾರ ಜಾತ್ರೆ ಚಿತ್ರ (ದ್ವಿತೀಯ ಸ್ಥಾನ), 'ಪ್ರಜಾವಾಣಿ'ಯ ಕೊಪ್ಪಳ ಛಾಯಾಗ್ರಾಹಕ ಭರತ್ ಕಂದಕೂರ ಅವರ ಅಂಜನಾದ್ರಿ ಬೆಟ್ಟದ ಹನುಮ ಮಾಲೆ ಚಿತ್ರ (ತೃತೀಯ ಸ್ಥಾನ) ಪಡೆದಿವೆ.

ಮುಂದಿನ ವರ್ಷದ ಛಾಯಾಚಿತ್ರ ಸ್ಪರ್ಧೆಗೆ 'ಕನಾಟಕದ ಹಬ್ಬ ಮತ್ತು ಆಚರಣೆಗಳು' ಎನ್ನುವ ವಿಷಯ ಆಯ್ಕೆ ಮಾಡಲಾಗಿದ್ದು, ಛಾಯಾಗ್ರಾಹಕರು ಭಾಗಿಯಾಗಬಹುದು ಎಂದು ಕ್ಲಬ್ ಅಧ್ಯಕ್ಷ ಟಿ.ಕೆಂಪಣ್ಣ ತಿಳಿಸಿದ್ದಾರೆ.

ಪ್ರಶಸ್ತಿಯು ನಗದು ಹಾಗೂ ಪುರಸ್ಕಾರ ಒಳಗೊಂಡಿದ್ದು ಏಪ್ರಿಲ್ ಎರಡನೇ ವಾರದಲ್ಲಿ ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

# ಅಕ್ರಮವಾಗಿ ಎಲ್ ಪಿಜಿ ಬಳಕೆ ಓರ್ವ ಬಂಧನ 9 ಸಿಲಿಂಡರ್ ವಶ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕೊಲ್ಲಿ ಯುದ್ದದಿಂದ ಉಂಟಾಗುತ್ತಿರುವ ಎಲ್ ಪಿ ಜಿ ಸಿಲಿಂಡರ್ ಸಮಸ್ಯೆ ಹಿನ್ನಲೆಯಲ್ಲಿ ಸಿಲಿಂಡರ್ಗಳ ಕೃತಕ ಅಭಾವ ಸೃಷ್ಟಿಸುವ ಹಾಗೂ ಅಕ್ರಮ ಸಂಗ್ರಹ, ಸಾಗಣೆ ಮಾಡುವವರ ವಿರುದ್ದ ಪೊಲೀಸರು ದಾಳಿ ನಡೆಸುತ್ತಿದ್ದಾರೆ.

ನಿನ್ನೆ ಬಳ್ಳಾರಿ ಗ್ರಾಮೀಣ ಪೊಲೀಸರು ಇಲ್ಲಿನ ಗೌತಮ ನಗರದ ವಾಟರ್ ಟ್ಯಾಂಕ್ ಹತ್ತಿರ, ನಾಗಲಕೆರೆ ನಿವಾಸಿ ಗಂಗಾಮೂರ್ತಿ(28) ಎಂಬಾತ ಗೃಹ ಬಳಕೆಯ ಸಿಲಿಂಡರ್ ತಂದು , ವಾಣಿಜ್ಯ ಬಳಕೆಯ ಖಾಲಿ ಸಿಲಿಂಡರ್ ಹಾಗೂ ಆಟೋಗಳಿಗೆ ಅಕ್ರಮವಾಗಿ ಗ್ಯಾಸನ್ನು ಹೆಚ್ಚಿನ ದರಕ್ಕೆ ತುಂಬಿ ಮಾರಟ ಮಾಡುತ್ತಿದ್ದ.

ಗ್ರಾಮೀಣ ಠಾಣೆಯ ಇನ್ಸಪೇಕ್ಟರ್ ಉದಯರವಿ ಮತ್ತವರ ಸಿಬ್ಬಂದಿ ಶ್ರೀನಿವಾಸ, ಬೀರಪ್ಪ, ನಾಗರೆಡ್ಡಿ, ರಮೇಶ ಬಾಬು ಮತ್ತು ಆಹಾರ ಇಲಾಖೆಯ ಆಹಾರ ನಿರೀಕ್ಷಕ ಅದಿಶೇಷ ಅಂಬೇಡ್ಕರ್ ಇವರ ದಾಳಿ ಮಾಡಿ ಆರೋಪಿ ಗಂಗಾಮೂರ್ತಿಯನ್ನು ಬಂಧಿಸಿ, 4 ವಾಣಿಜ್ಯ, 5 ಗೃಹ ಬಳಕೆಯ ಸಿಲಿಂಡರ್ ಹಾಗೂ ಒಂದು ಆಟೋವನ್ನು ಜಪ್ತು ಮಾಡಿದ್ದಾರೆ.

# ಲೋಹಿಯಾ ಚನ್ನಬಸವಣ್ಣಗೆ ಡಾ.ಗುರುಲಿಂಗ ಕಾಪಸೆ ಸಾಹಿತ್ಯ ಪ್ರಶಸ್ತಿ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ಲೋಹಿಯಾ ಪ್ರಕಾಶನದ ಸಿ. ಚನ್ನಬಸವಣ್ಣನವರು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ನೀಡುವ 2026ನೇ ಸಾಲಿನ ಡಾ. ಗುರುಲಿಂಗ ಕಾಪಸೆ ದತ್ತಿ ಸಾಹಿತ್ಯ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.



ನಾಡಿದ್ದು ಏ. 2ರಂದು ಸಂಜೆ 6 ಗಂಟೆಗೆ ಧಾರವಾಡದ ಕ.ವಿ.ವ.ಸಂಘದ ಶ್ರೀ.ರಾ.ಹ. ದೇಶಪಾಂಡೆ ಸಭಾಂಗಣದಲ್ಲಿ ನಡೆಯುವ ಸಮಾರಂಭದಲ್ಲಿ ಅಥಣಿ ವಿಮೋಚನಾ ಸಂಸ್ಥೆಯ ಅಧ್ಯಕ್ಷ ಬಿ.ಎಲ್. ಪಾಟೀಲ್ ಪ್ರಶಸ್ತಿ ಪ್ರದಾನ ಮಾಡಲಿದ್ದು, ಹೊಸತು ಪತ್ರಿಕೆ ಸಂಪಾದಕ ಡಾ. ಸಿದ್ಧನಗೌಡ ಪಾಟೀಲ, ಕ.ವಿ.ವ. ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ, ಡಾ. ಎಂ.ಎಂ. ಕಲಬುರ್ಗಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಅಧ್ಯಕ್ಷ ಡಾ. ವೀರಣ್ಣ ರಾಜೂರ ಮೊದಲಾದವರು ಭಾಗವಹಿಸಲಿದ್ದಾರೆ.

# ಸಮಾಜಮುಖಿ ಪ್ರಕಾಶನದ 2025ನೇ ಸಾಲಿನ ಕಥಾಸ್ಪರ್ಧೆ ಫಲಿತಾಂಶ




ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲೆಯವರೇ ಆದ ಚಂದ್ರಕಾಂತ ವಡ್ಡು ಅವರ ಸಮಾಜಮುಖಿ ಪ್ರಕಾಶನವು 2025ನೇ ಸಾಲಿನ ವಾರ್ಷಿಕ ಕಥಾ ಸ್ಪರ್ಧೆಯ ಫಲಿತಾಂಶ ಪ್ರಕಟಿಸಿದ್ದು. ಉಡುಪಿಯ ಶೀಲಾ ಪೈ–'ಗ್ಲೋರಿಯೊಸಾಸುಪರ್ಬ', ಮೈಸೂರಿನ ಎಂ.ಎಸ್.ಶೇಖರ್–'ದೊಡ್ಡೈರೆ ಬೇಟೆ', ಬೆಂಗಳೂರಿನ ಜಯರಾಮಾಚಾರಿ– 'ಸಾಕವ್ವಳ ರಸ್ತೆ ಪುರಾಣ', ಬೆಂಗಳೂರಿನ ಮಂಜುನಾಥ ನಾಯ್– 'ಕಾಫಿ ತೋಟದ ಆ ಕಾರ್ಮಿಕನೂ, ಕಬ್ಬೆಕ್ಕಿನ ಕಬಾಬೂ', ಮುಂಬೈನ ದೇವೇಂದ್ರ ಅಬ್ಬಿಗೇರಿ–'ಮೋರ್ಸ್ ಕೋಡ್' ಅವರ ಕಥೆಗಳು ಆಯ್ಕೆಯಾಗಿವೆ.

ಈ 5 ಕಥೆಗಳಿಗೆ ತಲಾ 5 ಸಾವಿರ ನಗದು ಬಹುಮಾನ ನೀಡಲಿದೆ. ಎಸ್. ರಮ್ಯಾ, ಎಸ್. ಹರೀಶ್, ಟಿ.ಎಂ.ರಮೇಶ್, ಗೌರಿಚಂದ್ರ ಕೇಸರಿ, ನಿರ್ಮಲಾ ಸುರತ್ಕಲ್, ಜಿ.ಪ್ರವೀಣ್ ಕುಮಾರ್, ಸಂತೇಬೆನ್ನೂರು ಫೈಜಟ್ಟ ರಾಜ್, ಪಾಪುಗುರು, ಹನುಮಂತ ಹೆರೂರು ಮತ್ತು ಭೋಜರಾಜ ಎಚ್.ಸೊಪ್ಪಿಮಠ ಅವರ ಕಥೆಗಳು ಸ್ಪರ್ಧೆಯಲ್ಲಿ ಮೆಚ್ಚುಗೆ ಪಡೆದು ಸಮಾಜ ಮುಖಿ ವಾರ್ಷಿಕ ಕಥಾ ಸಂಕಲನಕ್ಕೆ ಆಯ್ಕೆಯಾಗಿವೆ ಎಂದು ಸಮಾಜಮುಖಿ ಪ್ರಕಾಶನದ ಚಂದ್ರಕಾಂತ ವಡ್ಡು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದಾವಣಗೆರೆ ಉಪ ಚುನಾವಣೆಗೆ ವೀಕ್ಷಕರಾಗಿ ಕಂದುಕೂರು ರಾಮುಡು ನೇಮಕ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ರಾಜ್ಯದ ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದ ಉಪ ಚುನಾವಣೆಯ ಪ್ರಚಾರಕ್ಕೆ ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದದಿಂದ.



ನಗರದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ರಾಜ್ಯ ಉಪಾಧ್ಯಕ್ಷರು (ಸಫಯಿ ಕರ್ಮಚಾರಿ ವಿಭಾಗ) ಹಾಗು ರಾಜ್ಯ ಸಂಚಾಲಕ ಕಂದುಕೂರು ರಾಮುಡು ಅವರನ್ನು ವೀಕ್ಷಕರನ್ನಾಗಿ ನೇಮಕ ಮಾಡಲಾಗಿದೆ.

ಕಾಂಗ್ರೆಸ್ ಪಕ್ಷದಲ್ಲಿ ಕಳೆದ ಮೂರು ದಶಕಗಳಿಂದ ನಿಷ್ಠಾವಂತ ಕಾರ್ಯಕರ್ತರಾಗಿ, ಮುಖಂಡನಾಗಿ ಗುರುತಿಸಿಕೊಂಡಿರುವ ರಾಮುಡು ಅವರನ್ನು ಈ ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಪರಿಣಾಮಕಾರಿ ಪ್ರಚಾರ ಕೈಗೊಳ್ಳಲು ಇತರ ಮುಖಂಡರ ಜೊತೆ ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಆರ್.ಧರ್ಮಸೇನ ಅವರು ನೇಮಕ ಮಾಡಿದ್ದಾರೆ. ದಾವಣಗೆರೆಗೆ ತೆರಳಿ ಪಕ್ಷದ ಅಭ್ಯರ್ಥಿ ಸಮರ್ಥ್ ಶ್ಯಾಮನೂರು ಇವರ ಗೆಲುವಿಗೆ ಶ್ರಮಿಸಲು, ಮತದಾರರ ಮನವೊಲಿಕೆಗೆ ಸೂಚಿಸಲಾಗಿದೆ.

# ಈ ರೀತಿ ಓವರ್ ಲೋಡ್ ಸಂಚಾರ ನಗರದಲ್ಲಿ ಸರಿಯೇ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಈ ರೀತಿ ಕಲ್ಲಿನ ಬಿಂಚೆಯನ್ನು ಓವರ್ ಲೋಡ್ ಮಾಡಿ ನಗರದಲ್ಲಿ ಟಿಪ್ಪರ್ ಲಾರಿಗಳ ಓಡಾಟ ಸರಿಯೇ ಎಂಬ ಪ್ರಶ್ನೆ ನಾಗರೀಕರದ್ದು.



ಓವರ್ ಲೋಡ್‌ನಿಂದ ಲಾರಿಯಲ್ಲಿನ ಬಿಂಚೆ ರಸ್ತೆಯಲ್ಲಿ ಸಂಚರಿಸುವ ದ್ವಿಚಕ್ರವಾಹನ ಸವಾರರು ಮತ್ತು ಪಾದಾಚಾರಿಗಳ ಮೇಲೆ ಬೀಳುವ ಸಾಧ್ಯತೆ ಇದೆ. ನಗರದ ರಸ್ತೆಗಳೇ ಸರಿಇಲ್ಲತಗ್ಗು ಗುಂಡುಗಳ ರಸ್ತೆಯಲ್ಲಿ ಸಂಚರಿಸುವಾಗ ಬಿಂಚೆ ಕೆಳಕ್ಕೆ ಬೀಳುತ್ತೆ. ಇನ್ನು ಸ್ಪೀಟ್ ಬ್ರೇಕರ್ ಗಳ ಬಳಿಯಂತೂ ಬಿಂಚೆ ಕೆಳಕ್ಕೆ ಬಿದ್ದಿರುವುದನ್ನು ಅಲ್ಲಲ್ಲಿ ಕಾಣ ಬಹುದು.

ನಿಗಧಿಗಿಂತ ಹೆಚ್ಚು ಲೋಡ್ ತರುವಿಂತಹ ಲಾರಿಗಳ ಓಡಾಟಕ್ಕೆ ಟ್ರಾಫಿಕ್ ಪೊಲೀಸರು, ಆರ್ ಟಿ.ಓಗಳು ಸುಮ್ಮನೇ ಏಕೆ ಇರುತ್ತಾರೆ.

ಇಂತಹ ಲಾರುಗಳಿಂದ ಬ್ರಸಾದ ಸ್ವೀಕರಿಸಿಯೇ ಇರಬೇಕು ಎಂಬುದು ಜನರ ಪ್ರಶ್ನೆ.

ತಾವು ಎಂಜಲು ತಿನ್ನಲು ಇತರರಿಗೆ ಸಮಸ್ಯೆ ಆಗುವಂತೆ ಮಾಡುವುದು ಸರಿಯಲ್ಲ. ಇಂತಹವುಗಳಿಗೆ ಕಡಿವಾಣ ಹಾಕಬೇಕು ಇಲ್ಲದಿದ್ದರೆ ಸಂಭವಿಸುವ ಅಪಾಯಗಳಿಗೆ ಕಾರಣ ರಾಗಬೇಕಾಗುತ್ತದೆ.

ಹೊಸದಾಗಿ ಬಂದ ಎಸ್ಪಿಯವರು ಆರಂಭದಲ್ಲಿ ಆಂದ್ರದ ಬೊಮ್ಮನಹಾಳ್ ಕಡೆಯಿಂದ ಈ ರೀತ8 ಬಿಂಚೆ ತರುವ ಲಾರಿಗಳ ಮೇಲೆ ಗ್ರಾಮೀಣ ಪೊಲೀಸರಿಂದ ಕೇಸು ಹಾಕಿಸಿದರು. ಕೆಲ ಸರಿ ಹೋಗಿತ್ತು. ಮತ್ತೆ ಅದೇ ಚಾಳಿ ಆರಂಭಗೊಂಡಿದೆ.

# ಬಂಡಿಹಟ್ಟಿಯಲ್ಲಿ ಜಾನಪದ ಸಂಗೀತ ಸಂಭ್ರಮ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಇಲ್ಲಿನ ಮಾರುತಿ ತೊಗಲುಗೊಂಬೆ ಕಲಾ ಟ್ರಸ್ಟ್ ನಿಂದ ನಗರದ ಬಂಡಿಹಟ್ಟಿಯ ರಾಮನಗರದ ಗಿರಿಜಪ್ಪ ಅವಧೂತರ ಮಠದಲ್ಲಿ ನಿನ್ನೆ ಸಂಜೆ ನಡೆದ "ಜಾನಪದ ಕಲಾ ವೈಭವ" ನೆರೆದ ಪ್ರೇಕ್ಷಕರ ಮನಗೆದ್ದಿತು.

ಉದ್ಯಮಿ ಕೊರಲಗುಂದಿ ಬಸವನಗೌಡ ಕಾರ್ಯಕ್ರಮ ಉದ್ಘಾಟಿಸಿ, ಜನಪದ, ತತ್ವಪದಗಳು ಇಂದುಗೂ ಮಹತ್ವ ಪಡೆದಿರುವುದಕ್ಕೆ ಕಾರಣ ಅವುಗಳಲ್ಲಿರುವ ಸಾಹಿತ್ಯದ ಗಟ್ಟಿತನ, ಮನುಷ್ಯನ ಬದುಕಿನ ಸಾರವನ್ನು, ಮೋಕ್ಷದ ಮಾರ್ಗಗಳನ್ನು, ದುಡಿಮೆ, ಧಾನ, ಧರ್ಮ, ಗುರು, ಶಿಷ್ಯ ಪರಂಪರೆಯನ್ನು ಬೋಧಿಸುವ ಮಾರ್ಗಗಳನ್ನು ಇವುಗಳಲ್ಲಿ ಕಾಣುತ್ತೇವೆ. ಹೀಗಾಗಿ ಎಂದಿಗೂ ಜನಪದ ತತ್ವಪದ ಜಗತ್ತು ಇರುವರೆಗೂ ಬದುಕಿನ ಸತ್ಯವನ್ನು ಹೇಳುತ್ತವೆ ಎಂದು ಹೇಳಿದರು.




ಅಧ್ಯಕ್ಷತೆ ವಹಿಸಿ ಮಾತನಾಡಿದ ಬಳ್ಳಾರಿ ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷ ಯಲ್ಲನಗೌಡ ಶಂಕರಬಂಡೆ, ಶರೀಫರ ತತ್ವಪದಗಳು ಮತ್ತು ಅವರ ಗುರು ಶಿಷ್ಯ ಪರಂಪರೆ ಮೋಕ್ಷ ಮಾರ್ಗದ ಸಾರವನ್ನು ಅಂದಿನ ಕಾಲದಲ್ಲಿ ಜಾತಿ ಧರ್ಮಗಳನ್ನು ಮೀರಿ ಭಾವೈಕ್ಯತೆಯ ಭಾಗವಾಗಿದ್ದವೆಂದರು.

ಕರ್ಚೆಡು ತಿಪ್ಪೇಸ್ವಾಮಿ, ಯುವ ಉದ್ಯಮಿ ವೈ. ಮಾರುತಿ ಸಿರುಗುಪ್ಪ, ಸಪ್ತಸ್ವರ ಸಾಂಸ್ಕೃತಿಕ ಬಯಲಾಟ ಕಲೆ ಟ್ರಸ್ಟ್ ನ ಉಪಾಧ್ಯಕ್ಷೆ ಜಯಲಕ್ಷ್ಮಿ ಸುಬ್ರಮಣ್ಯಂ ಸಿರುಗುಪ್ಪ, ಬೈಲಾಟದ ಹಿರಿಯ ಕಲಾವಿದ ಹನುಮವಧೂತ ಹಾಗೂ ಮಾರುತಿ ತೊಗಲುಗೊಂಬೆ ಕಲಾ ಟ್ರಸ್ಟ್ ನ ಅಧ್ಯಕ್ಷ ಸುಬ್ಬಣ್ಣ ಉಪಸ್ಥಿತರಿದ್ದರು. ಜಡೇಶ್ ಎಮ್ಮಿಗನೂರು ಅವರಿಂದ ಜನಪದ ಸಂಗೀತ, ಕೆ. ರಮೇಶ್ ತಂಡದಿಂದ ತತ್ವಪದ ಗಾಯನ ಹನುಮವಧೂತ ತಂಡದವರಿಂದ ರಂಗಗೀತೆ ಪ್ರಸ್ತುತಪಡಿಸಲಾಯ್ತು.

# ಜೈನ ಸಮುದಾಯದಿಂದ ಮಹಾವೀರ ಜಯಂತಿ ಆಚರಣೆ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜೈನ ತೀರ್ಥಂಕರ ಭಗವಾನ್ ಮಹಾವೀರ ಅವರ ಜಯಂತಿ ನಗರದ ಜೈನ ಸಮುದಾಯದ ಜನತೆ ಸಂಭ್ರಮದಿಂದ ಆಚರಣೆ ಮಾಡಿತು.

ನಗರದ ತೇರು ಬೀದಿಯಲ್ಲಿನ ಜೈನ ಶ್ವೇತಂಬರ ಪಾರ್ಶನಾಥ ಮಂದಿರದಿಂದ ಮಹಾವೀರರ ಭಾವಚಿತ್ರದ ಮೆರವಣಿಗೆ ಜಿಲ್ಲಾಡಳಿತ ಮತ್ತು ಜೈನ ಸಮುದಾಯದಿಂದ ನಡೆಯಿತು. ಮಂದಿರದಿಂದ ಬ್ರಾಹ್ಮಣ ಬೀದಿ, ಕಾಳಮ್ಮರಸ್ತೆ, ಬೆಂಗಳೂರು ರಸ್ತೆಯ ಮೂಲಕ ಜನಪದ ಕಲಾತಂಡಗಳೊಂದಿಗಿ ಸಾಗಿದ ಮೆರವಣಿಗೆ ಜೈನಮಂದಿರಕ್ಕೆ ಬಂದು ತಲುಪಿತು.

ನಂತರ ಜೈನ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಜೈನ ಶ್ರೀಗಳು, ಮೇಯರ್ ಪಿ.ಗಾದೆಪ್ಪ, ಲಿಡ್ಕರ್ ಅಧ್ಯಕ್ಷ ಮುಂಡ್ರಿಗಿ ನಾಗರಾಜ್ ಮೊದಲಾದವರು ಪಾಲ್ಗೊಂಡು ಜೈನ ಧರ್ಮದ ಅಹಿಂಸಾ ತತ್ವದ ಮಹತ್ವವನ್ನು ಶ್ಲಾಘಿಸಿದರು. ಜೈನ ಸಮಾಜದ ಮುಖಂಡರು ಪಾಲ್ಗೊಂಡಿದ್ದರು.

# ಕುಕನೂರಿನಲ್ಲಿ ಧೂಳು ಸಮಸ್ಯೆ ಕಾಂಕ್ರೀಟ್ ರಸ್ತೆಗೆ ಟಾರ್ ಹಾಸಲು ಮನವಿ

ಮಲ್ಲಮ್ಮ ನುಡಿವಾರ್ತೆ ಕುಕನೂರ :

ಪಟ್ಟಣದ ಪ್ರಮುಖ ಸಂಚಾರ ಮಾರ್ಗವಾದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಿಂದ ವಿದ್ಯಾನಂದ ಗುರುಕುಲ ಶಾಲೆಯವರೆಗೆ ಇರುವ ಕಾಂಕ್ರೀಟ್ ರಸ್ತೆಯ ಮೇಲೆ ಬಿಟುಮಿನ್ (ಟಾರ್) ಹಾಸುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ. ಕುಕನೂರು ಪಟ್ಟಣ ಹಿತರಕ್ಷಣಾ ಸಮಿತಿ ವತಿಯಿಂದ ಕುಕನೂರಿನ ನೀರಿಕ್ಷಣ ಮಂದಿರದಲ್ಲಿ ಮುಖ್ಯಮಂತ್ರಿ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರಾದ ಬಸವರಾಜ ರಾಯರೆಡ್ಡಿ ಅವರಿಗೆ ಮನವಿ ಸಲ್ಲಿಸಲಾಗಿದ್ದು, ರಸ್ತೆ ಮೇಲೆ ಹೆಚ್ಚುತ್ತಿರುವ ಧೂಳಿನಿಂದ ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟಾಗಿದೆ ಎಂದು ತಿಳಿಸಲಾಗಿದೆ.ಈ ರಸ್ತೆ ಸುತ್ತಮುತ್ತ ಶಾಲೆಗಳು ಹಾಗೂ ವಸತಿ ಪ್ರದೇಶಗಳು ಇರುವುದರಿಂದ ಪ್ರತಿದಿನ ವಿದ್ಯಾರ್ಥಿಗಳು, ಮಹಿಳೆಯರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುತ್ತಿದ್ದಾರೆ. ಆದರೆ ವಾಹನ ಸಂಚಾರದ ಪರಿಣಾಮದಿಂದಾಗಿ ರಸ್ತೆ ಮೇಲೆ ಧೂಳು ಹೆಚ್ಚಾಗಿ ಸಂಗ್ರಹವಾಗುತ್ತಿದ್ದು, ಕಣ್ಣಿನ ಸಮಸ್ಯೆಗಳು, ಶ್ವಾಸಕೋಶ ಕಾಯಿಲೆಗಳು ಹಾಗೂ ಹೃದಯ ಸಂಬಂಧಿತ ಸಮಸ್ಯೆಗಳು ಹೆಚ್ಚುತ್ತಿರುವ ಬಗ್ಗೆ ಆತಂಕ ವ್ಯಕ್ತವಾಗಿದೆ.ಪಟ್ಟಣ ಪಂಚಾಯಿತಿ ವತಿಯಿಂದ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಗುತ್ತಿದ್ದರೂ, ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಿಲ್ಲ. ಈ ಹಿನ್ನೆಲೆಯಲ್ಲಿ ಕಾಂಕ್ರೀಟ್ ರಸ್ತೆಯ ಮೇಲೆ "ಬಿಟುಮಿನಸ್ ಓವರ್‌ಲೇ" ವಿಧಾನದಲ್ಲಿ ಟಾರ್ ಹಾಸುವಂತೆ ಮನವಿಯಲ್ಲಿ ಸೂಚಿಸಲಾಗಿದೆ.ಈ ವಿಧಾನದಿಂದ ಧೂಳು ನಿಯಂತ್ರಣವಾಗುವುದು, ವಾಹನ ಸಂಚಾರ ಸುಗಮವಾಗುವುದು ಹಾಗೂ ಸಾರ್ವಜನಿಕರ ಸುರಕ್ಷತೆ ಹೆಚ್ಚುವುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ದೇಶದ ಹಲವು ನಗರಗಳಲ್ಲಿ ಈ ವಿಧಾನ ಯಶಸ್ವಿಯಾಗಿ ಜಾರಿಗೆ ಬಂದಿರುವುದರಿಂದ ಕುಕನೂರಲ್ಲಿಯೂ ಇದನ್ನು ಅನುಸರಿಸಲು ಆಗ್ರಹಿಸಲಾಗಿದೆ.ಸಾರ್ವಜನಿಕ ಹಿತದೃಷ್ಟಿಯಿಂದ ಸಂಬಂಧಿತ ಇಲಾಖೆ ಶೀಘ್ರ ಕ್ರಮ ಕೈಗೊಂಡು ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಸಮಿತಿಯ ಸಹ–ಸಂಚಾಲಕರಾದ ಮಂಜುನಾಥ ನಾಡಗೌಡ್ರು ಸೇರಿದಂತೆ ಅಂದಪ್ಪ ಜವಳಿ, ಕಳಕೇಶ್ ಹತ್ತಿಕಟಗಿ, ರಾಮನಗೌಡ ಅರಿಶಿನಬಿಡಿ, ವಿರೇಶ್ ಸಬರದ್, ಗಂಗಾಧರ್ ನಾರಾಯಣಿ, ಚಂದ್ರು ಬಗನಾಲ್ ಮತ್ತು ಸದಸ್ಯರು ಮನವಿ ಮಾಡಿದ್ದಾರೆ.

# ಸನ್ಮಾರ್ಗ ಗೆಳೆಯರ ಬಳಗದಿಂದ ಸರ್ಕಾರಿ ಬಸ್ ಗಳಲ್ಲಿ ಕುಡಿಯುವ ನೀರು

ಬಳ್ಳಾರಿ, : ಹಲವಾರು ಸಾಮಾಜಿಕ ಸೇವಾ ಕಾರಗಯಕ್ರಮಗಳಲ್ಲಿ ತೊಡಗಿಸಿಕೊಳ್ಳುವ ಸನ್ಮಾರ್ಗ ಗೆಳೆಯರ ಬಳಗ ಬೇಸಿಗೆ ಕಾಲದಲ್ಲಿ ಹಲವು ಸರ್ಕಾರಿ ಬಸ್ ಗಳಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಕಳೆದ 11 ವರ್ಷಗಳಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಂಡು ಬಂದಿದ್ದು. ಅದು ಈ ವರ್ಷವೂ ಮುಂದುವರೆದಿದೆ. ಇಂದು ನಗರದ ಬಸ್ ನಿಲ್ದಾಣದಲ್ಲಿ ಮಹಾನಗರ ಪಾಲಿಕೆಯ ಆಯುಕ್ತ ಪಿ.ಎಸ್. ಮಂಜುನಾಥ ಅವರು ಈ ಕಾರ್ಯಕ್ಕೆ ಚಾಲನೆ ನೀಡಿದರು. ಅವರು ಈ ವೇಳೆ ಮಾತನಾಡಿ ಬಿರು ಬೇಸಿಗೆಯಲ್ಲಿ ಬಾಯಾರಿದವರಿಗೆ ಸ ಶುದ್ಧ ಕುಡಿಯುವ ನೀರನ್ನು ಪೂರೈಸುತ್ತಿರುವುದು ಶ್ಲಾಘನೀಯ ಕಾರ್ಯ. ಹಸಿದವರಿಗೆ ಅನ್ನ ನೀಡುವುದು, ತೃಷೆಯಿಂದ ಬಳಲುವವರಿಗೆ ಕುಡಿಯಲು ನೀರು ಕೊಡುವುದು ಬಿಸಿಲಿನಿಂದ ಬಳಲುವವರಿಗೆ ನೆರಳಿನ ಆಶ್ರಯ ನೀಡುವುದು ಪುಣ್ಯದ ಕೆಲಸವೆಂದರು.

ಅಧ್ಯಕ್ಷತೆ ವಹಿಸಿದ್ದ ಸನ್ಮಾರ್ಗ ಗೆಳೆಯರ ಬಳಗದ ಅಧ್ಯಕ್ಷ ಲಕ್ಷ್ಮಿಕಾಂತ್ ರೆಡ್ಡಿ



ಮಾತನಾಡಿ, ಸಾರಿಗೆ ಇಲಾಖೆ ಮತ್ತು ಸಾರ್ವಜನಿಕರ ಸಹಕಾರದಿಂದ ಈ ರೀತಿಯ ಜನಮುಖಿ ಕಾರ್ಯಕ್ರಮವನ್ನು ಕಳೆದ 11 ವರ್ಷಗಳಿಂದಲೂ ಹಮ್ಮಿಕೊಳ್ಳತ್ತಾ ಬಂದಿದೆಂದರು.ಈ ಸಂದರ್ಭದಲ್ಲಿ ಗೌರವ ಅಧ್ಯಕ್ಷ ಕೆ.ಪಂಪಾಪತಿ ತೇಜ ರಾಘುರಾಮ ರಾವು, ಶೇಖರ ಕಾರ್ಯದರ್ಶಿ ಕಪ್ಪಗಲ್ಲು ಬಿ.ಚಂದ್ರಶೇಖರ ಆಚಾರಿ, ಡಿ. ಟಿ. ಓ. ಬಿರಾದಾರ, ಡಿ. ಎಂ. ಈ. ಪಾಲಕ್ಷಪ್ಪ, ಕಾರ್ಮಿಕ ಕಲ್ಯಾಣ ಅಧಿಕಾರಿ ಕರಿಗೌಡ, ಡಿಪೂ ಮೆನೇಜರ್ ಹರಿಕೃಷ್ಣ, ಆಶೋಕ ಭಂಡಾರಿ, ಮಾರುತಿ, ಕೆ.ವಿಶ್ವನಾಥ ಮೊದಲಾದವರು ಇದ್ದರು

# ಸರ್ಕಾರಿ ಶಾಲೆ ಮುಚ್ಚಲು ಬಿಡುವುದಿಲ್ಲ ಮದಿರೆ, ಕೋಳೂರು ಗ್ರಾಮಸ್ಥರು

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಎಐಡಿಎಸ್‌ಓ ನೇತೃತ್ವದಲ್ಲಿ ಬಳ್ಳಾರಿ ಜಿಲ್ಲೆಯ ಕುರುಗೋಡು ತಾಲೂಕಿನ ಮದಿರೆ ಮತ್ತು ಕೋಳೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಉರ್ದು ಕಿರಿಯ ಪ್ರಾಥಮಿಕ ಶಾಲೆಗಳನ್ನು ಮುಚ್ಚಿ ಕೊಳೋರು ಪ್ರೌಢಶಾಲೆಗೆ ಮ್ಯಾಗ್ನೆಟ್ ಮಾಡುವುದನ್ನು ವಿರೋಧಿಸಿ ಎರಡು ಗ್ರಾಮಗಳ ವಿದ್ಯಾರ್ಥಿಗಳು ಮತ್ತು ಪೋಷಕರು ಹಾಗೂ ಗ್ರಾಮಸ್ಥರು ಕೆ ಪಿ ಎಸ್ ಮ್ಯಾಗ್ನೆಟ್ ಯೋಜನೆಯ ಅಡಿಯಲ್ಲಿ 40,000ಕ್ಕೂ ಅಧಿಕ ಸರ್ಕಾರಿ ಶಾಲೆಗಳನ್ನು ಮುಚ್ಚಲು ಹೊರಟಿರುವ ಸರ್ಕಾರದ ನೀತಿಯ ವಿರುದ್ಧ ಪ್ರತಿಭಟನೆ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಎಐಡಿಎಸ್‌ಓ ಜಿಲ್ಲಾ ಉಪಾಧ್ಯಕ್ಷರು ಶಾಂತಿ ಮಾತನಾಡಿ, ಸಾವಿತ್ರಿಬಾಯಿ–ಜ್ಯೋತಿಬಾ ಫುಲೆಯವರ ಹೋರಾಟ ಮತ್ತು ಪರಿಶ್ರಮದ ಫಲವಾಗಿ ಇಂದು ಹಳ್ಳಿಗಳಿಗೆ ಸರ್ಕಾರಿ ಶಾಲೆಗಳು ಆರಂಭವಾಗಿವೆ. ಈ ಎಲ್ಲರ ಮಹಾತ್ಮರ ಆಶಯಗಳನ್ನು ಗಾಳಿಗೆ ತೂರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ" ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಕಂಬಳಿ ಮಂಜುನಾಥ್ ಅವರು ಮಾತನಾಡುತ್ತಾ ರಾಜ್ಯದಾದ್ಯಂತ ಈ ಯೋಜನೆ ವಿರುದ್ಧ ಜನ ಆಕ್ರೋಶ ಇದ್ದರೂ, ಕಿಂಚಿತ್ತು ಬೆಲೆ ಇಲ್ಲದೆ ಈ ಭಾಗದ ಜನಗಳ ಅನುಕೂಲಕ್ಕೆ ಇರುವಂತ ಏಏಖಆಃ ನಿಧಿಯನ್ನು ಶಾಲೆಗಳನ್ನು ಮುಚ್ಚಲು ಬಳಸಿಕೊಳ್ಳುತ್ತಿರುವುದು ಅತ್ಯಂತ ಜನ ವಿರೋಧಿ ನೀತಿಯಾಗಿದೆ ಎಂದು ಅವರು ಕಟುವಾಗಿ ಟೀಕಿಸಿದರು.

ಕೆ.ಕೆ.ಆರ್.ಡಿ.ಬಿ ಕಾರ್ಮಿಕ ಸಂಘಟನೆಯ ಜಿಲ್ಲಾ ಮುಖಂಡರಾದ ಪ್ರಮೋದ್ ಅವರು ಮಾತನಾಡುತ್ತಾ 6ನೇ ತರಗತಿಯಿಂದಲೇ ಕೆಪಿಎಸ್ ಶಾಲೆಯಲ್ಲಿ ಟೈಲರಿಂಗ್ ಮಾಡುವುದು,




ಅಡಿಕೆ ಸುಲಿಯುವುದು ಸೇರಿದಂತೆ ಇತರೆ ಕಸುಬುಗಳನ್ನು ಕಲಿಸುವುದಾಗಿ ಸರ್ಕಾರ ಹೇಳಿದೆ. ಸಮಾಜದ ತಳಸಮುದಾಯದ ಮಕ್ಕಳ ವಿದ್ಯೆ ಕಸಿದು ಕೂಲಿಗೆ ಕಳಿಸುವ ಸರ್ಕಾರದ ಹುನ್ನಾರವನ್ನು ನಾವು ಒಪ್ಪುವುದಿಲ್ಲ. ಈ ಯೋಜನೆ ರದ್ದಾಗವವರೆಗೂ ನಿರಂತರವಾಗಿ ಹೋರಾಟ ನಡೆಸುತ್ತೇವೆ" ಎಂದು ಕರ್ನಾಟಕ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ರೈತರು–ಕಾರ್ಮಿಕರು–ದಿನಗೂಲಿ ಕೆಲಸ ಮಾಡುವವರು ತಮ್ಮ ಮಕ್ಕಳನ್ನು ಊರಿನಲ್ಲೇ ಸರ್ಕಾರಿ ಶಾಲೆ ಇರುವುದರಿಂದ ಮಕ್ಕಳನ್ನು ನೆಮ್ಮದಿಯಿಂದ ಶಾಲೆಗಳಿಗೆ ಕಳುಹಿಸಲಾಗುತ್ತಿದೆ, ಊರಿನಲ್ಲಿರುವ ಸರ್ಕಾರಿ ಶಾಲೆ ಮುಚ್ಚಿದರೆ 3ಕೀ.ಮೀ ರಿಂದ 5 ಕೀ.ಮೀ ದೂರ ಇರುವ ಶಾಲೆಗೆ ನಮ್ಮ ಮಕ್ಕಳನ್ನು ಕಳುಹಿಸಲು ಸಾಧ್ಯವಿಲ್ಲ ದೂರದಲ್ಲಿರುವ ಕೆಪಿಎಸ್ ಶಾಲೆಗೆ ಮಕ್ಕಳನ್ನು ಹೇಗೆ ಕಳಿಸುವುದು ದಾರಿಯಲ್ಲಿ ಭಾರಿ ಪ್ರಮಾಣದಲ್ಲಿ ಲಾರಿ,ಬಸ್ಸುಗಳ ಓಡಾಟ ಇರುತ್ತದೆ ಎಂದು ಪೋಷಕರು ಆತಂಕ ವ್ಯಕ್ತಪಡಿಸಿದರು

ಈ ಕೂಡಲೇ ರಾಜ್ಯ ಸರ್ಕಾರ ಎಚ್ಚೆತ್ತು ಕೊಂಡು ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಅಡಿಯಲ್ಲಿ ಸರ್ಕಾರಿ ಶಾಲೆಗಳ ಮುಚ್ಚವುದು ಕೈಬಿಡಬೇಕೆಂದು ಅವರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಐಯುಟಿ–ಯುಸಿ ಕಾರ್ಮಿಕ ಸಂಘಟನೆಯ ಮುಖಂಡರಾದ , ಜಿ ಸುರೇಶ್, ಎಐಕೆಕೆಎಂಎಸ್ ರೈತ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ರಾಜ , ಜಿಲ್ಲಾಧ್ಯಕ್ಷರು ಗೋವಿಂದ್, ಎಐಡಿವೈಓ ಯುವಜನ ಸಂಘಟನೆ ಜಿಲ್ಲಾ ಕಾರ್ಯದರ್ಶಿ ಜಗದೀಶ್, ಎಐಎಂಎಸ್ಎಸ್ ಮಹಿಳಾ ಸಂಘಟನೆ ಜಿಲ್ಲಾ ಸಮಿತಿಯ ಸದಸ್ಯರಾದ, ವಿದ್ಯಾ ಮತ್ತು ಎಸ್‌ಇಸಿ ಜಿಲ್ಲಾ ಮುಖಂಡರಾದ ನಾಗರತ್ನ ಹಾಗೂ ಗ್ರಾಮಸ್ಥರಾದ , ನಾಗರಾಜ್, ಎನ್ ಕೆಂಚ ಮಾಳಪ್ಪ, ದೊಡ್ಡಬಸಪ್ಪ ಡಿ.ಕೆ. ಗಾದಿಲಿಂಗಪ್ಪ, ಹುಲಿಗೆಮ್ಮ, ಲಕ್ಷ್ಮಿ, ಪಾಲ್ಗೊಂಡಿದ್ದರು.



ಯುಗಾದಿ ವಿಶೇಷ ಸಂಚಿಕೆಯನ್ನು ಜಾತ್ಯತೀತ ಜನತಾದಳ ಪಕ್ಷದ ನಗರ ಘಟಕ ಅಧ್ಯಕ್ಷರು ಎಂ .ಎಸ್. ವಂಡ್ರಿ ಸೋಮವಾರ ಸಾಯಂಕಾಲ ಜಿಲ್ಲಾ ಜೆಡಿಎಸ್ ಪಕ್ಷದ ಕಚೇರಿಯಲ್ಲಿ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲ ಅವರು ಮಾತನಾಡುತ್ತಾ ಕಲ್ಯಾಣ ಕರ್ನಾಟಕ ಭಾಗದ ಮಲ್ಲಮ್ಮ ನುಡಿ ದಿನಪತ್ರಿಕೆ ಉನ್ನತ ಮಟ್ಟಕ್ಕೆ ಬೆಳಬೇಕೆಂದು ಮಾತನಾಡಿದರು. ಈಗಾಗಲೇ ಈ ಮಲ್ಲಮ್ಮ ನೋಡಿ ದಿನಪತ್ರಿಕೆ ಕಲ್ಯಾಣ ಕರ್ನಾಟಕ ಎಲ್ಲಾ ಜಿಲ್ಲೆಗೆ ಸರ್ಕಾರ ಮಾನ್ಯತೆ ಪಡೆದಿದ್ದು. ಕರ್ನಾಟಕ ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲಿ ಪತ್ರಿಕೆ ಬೆಳೆದೆಂದು ಶುಭ ಹಾರೈಸಿದರು.

# ಛಾಯಾಗ್ರಾಹಕರ ಮೇಲೆ ಹಲ್ಲೆಗೆ ಖಂಡನೆ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

_ಹಾಸನ ಜಿಲ್ಲೆ ಸಕಲೇಶ್ವರಪುರ ಭಾಗದ ಶ್ರೀ ಕಾಲ ಭೈರವೇಶ್ವರ ದೇವಸ್ಥಾನದಲ್ಲಿ ಛಾಯಾಗ್ರಾಹಕರ ಮೇಲೆ ಹಲ್ಲೆ ಮಾಡಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು. ಬಳ್ಳಾರಿ ಜಿಲ್ಲಾ ಫೋಟೋ ಗ್ರಾಫರ್ ಸಂಘದ ಜಿಲ್ಲಾಧ್ಯಕ್ಷರು, ಉಪಾಧ್ಯಕ್ಷರು ಮತ್ತು ಬಳ್ಳಾರಿ ಜಿಲ್ಲೆಯ ಎಲ್ಲಾ ತಾಲ್ಲೂಕು ಪದಾಧಿಕಾರಿಗಳು ಜಿಲ್ಲಾಡಳಿತದ ಮೂಲಕ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದ ಮನವಿ ಸಲ್ಲಿಸಿದೆ.ಫೋಟೋ ಚಿತ್ರಿಸುವ ಸಂದರ್ಭದಲ್ಲಿ ಏಕಾಏಕಿಯಾಗಿ



ಅಲ್ಲಿನ ಸ್ಥಳೀಯರು ಎಂದು ಹೇಳಿಕೊಂಡು ಕೆಲವು ಕೀಡಿಗೇಡಿಗಳು ಗೂಂಡಾಗಳಂತೆ ವರ್ತಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿ, ಛಾಯಾಗ್ರಹಕರ ಮೇಲೆ ದೈಹಿಕ ಹಲ್ಲೆ ನಡೆಸಿ ಹಾಗೂ ಕ್ಯಾಮರಾಗಳನ್ನು ಸಹ ಹಾನಿ ಉಂಟು ಮಾಡಿದ್ದಾರೆ.ಈ ಘಟನೆಯಲ್ಲಿ ನೊಂದ ನಮ್ಮ ವೃತ್ತಿಪರ ಛಾಯಾಗ್ರಾಹಕರಿಗೆ ನ್ಯಾಯ ಒದಗಿಸುವುದರ ಜೊತೆಗೆ ಹಲ್ಲೆ ಮಾಡಿದವರ ವಿರುದ್ಧ ಸೂಕ್ತ ಕಾನೂನು ರೀತಿಯ ಕ್ರಮ ಜರುಗಿಸಬೇಕು ಹಾಗೂ ಮುಂದಿನ ದಿನದಿನಗಳಲ್ಲಿ ಇಂತಹ ಘಟನೆಗಳು ಆಗದಂತೆ ಸೂಕ್ತ ಕ್ರಮವಹಿಸಬೇಕೆಂದು ಒತ್ತಾಯಿಸಿದ್ದಾರೆ.

# ಬೀದರ್‌ನಿಂದ ಬೆಂಗಳೂರುವರೆಗಿನ ಪಯಣಕ್ಕೆ 15ನೇ ವರ್ಷ..!

ಅದು 1–7–2011 ನೇ ಸಂವತ್ಸರ. ಬೀದರ್ ಜಿಲ್ಲೆಯ ಹುಮನಾಬಾದ್‌ನಲ್ಲಿ ಪ್ರತಿಷ್ಠಿತ ಮಲ್ಲಮ್ಮ ನುಡಿ ಉದಯವಾದ ಸಂವತ್ಸರ ಅಂದರೂ ಸರಿ. ಗಂಡುಮೆಟ್ಟಿದ ಬೀದರ್ ನೆಲದಗುಣವನ್ನುನಾಡಿನೆಲ್ಲೆಡೆಪರಿಚಯಿಸಬೇಕೆಂಬ



ಹಠ ತೊಟ್ಟ ಸಂವತ್ಸರ. ಅದುವರೆಗೂ ಈಭಾಗದಸುದ್ದಿಗಳೆಂದರೆಕೇವಲವಾಗಿ ಕಾಣುವ ಪ್ರತಿಷ್ಠಿತರ ವಲಯಕ್ಕೆ ಸೀಮಿತವಾಗಿದ್ದ ಪತ್ರಿಕಾ ಕಾರ್ಯ ಸರಳೀಕರಣಗೊಳ್ಳಬೇಕು.ಪ್ರಾಂತೀಯ ಜನರ ಸತ್ಯ, ಪ್ರಾಮಾಣಿಕ ಘಟನಾವಳಿಗಳು ರಾಜಧಾನಿ ಜನರಿಗೂಗೊತ್ತಾಗಬೇಕೆಂಬ ಕನಸು ಕಂಡ ಸಂವತ್ಸರ..! ಇದೇ ಮಣ್ಣಿನ ಕಣ ಕಣದಲ್ಲೂ ಸಮ ಸಮಾಜ, ಸರ್ವಧರ್ಮ ಧರ್ಮ ಸಮನ್ವಯತೆಯ ಹಣತೆ ಬೆಳಗಿ, ವಿಶ್ವಕಲ್ಯಾಣ ಮಂತ್ರ ಬೋಧಿಸಿದ್ದ ಜಗಜ್ಯೋತಿ ಬಸವಣ್ಣ ನಡೆದಾಡಿದ ಪುಣ್ಯ ಭೂಮಿಯ ಚರಿತೆ ಎಲ್ಲರಿಗೂ ಗೊತ್ತಾಗಬೇಕು. ಮಾತ್ರವಲ್ಲ, ಆದಿಲ್‌ಶಾಹಿ, ಕುತುಬ್‌ಶಾಹಿ, ನಿಜಾಮ್‌ಶಾಹಿ ಆಳರಸರ ಇತಿಹಾಸ ಓದಿದವರಿಗೆದೈನಂದಿನ ಘಟನಾವಳಿಗೆ ದನಿಯಾಗಬೇಕು. ದಮನಿತರ, ಶೋಷಿತರ ಸುದ್ದಿಗಳಿಗೆ ಕೊರತೆ ಇದ್ದ ಕಾಲದಲ್ಲಿ ಮಲ್ಲಮ್ಮ ನುಡಿ ಅಭಾಗ್ಯರ ಪಾಲಿಗೆ ಆಶಾಕಿರಣವಾಗಿ ಬೆಳಗಬೇಕೆಂಬ ಬಯಕೆಯ ಸಂವತ್ಸರ..!

ಆರಂಭ ಕಾಲಘಟ್ಟದ ಭ್ರೂಣಾವಸ್ಥೆಯಲ್ಲಿ ಕಷ್ಟ ಕೋಟಲೆ, ಈರ್ಷೆ, ಅಹಮಿಕೆಯನು ಮೀರಿ ಸತ್ಯದ ಚುಕ್ಕಾಣಿ ಹಿಡಿದ ಪತ್ರಿಕೆ ದಾಪು ಗಾಲಿಡತೊಗಿತು. ಗ್ರಾಮ, ತಾಲೂಕು ಜಿಲ್ಲೆಯಲ್ಲೂ ಪತ್ರಿಕೆಯ ಸುದ್ದಿಗಳು ತಮ್ಮ ಪ್ರಾಮಾಣಿಕತೆಯ ಮೂಲಕ ಓದುಗ ಪ್ರಭುಗಳ ಮನ ಮನೆ ತಲುಪತೊಡಗಿತು. ಆಕರ್ಷಣೀಯ ಶೈಲಿ, ಹರಿತ ಬರಹ ಮತ್ತು ವಸ್ತುನಿಷ್ಠ ಸತ್ಯಘಟನೆಗಳಿಂದ ವಾಚಕರ ಹೃದಯ ಗೆದ್ದಿತು.

ಮೂಲ ಜಿಲ್ಲೆ ಬೀದರ್‌ನಿಂದ ಮೀಡಿಯಾ ಲಿಸ್ಟ್‌ನಲ್ಲಿ ಸ್ಥಾನಪಡೆದು ಅದು ಪ್ರತಿಷ್ಠಿತ ಪ್ರಾದೇಶಿಕ ದೈನಿಕವಾಗಿ ಹೈದರಾಬಾದ್ ಕರ್ನಾಟಕದ ವೈವಿಧ್ಯಮಯ ವರ್ಣಪುಟಗಳಿಂದ ಸಾಟಿ ಇಲ್ಲದ ಮೇಟಿಯಾಗಿ ಪ್ರಗತಿಯ ಪಥದತ್ತಸಾಗತೊಡಗಿದ್ದು ನಿಜಕ್ಕೂ ಅಚ್ಚಳಿಯದ ಇತಿಹಾಸ..!

ಹುಮನಾಬಾದ್ ನಗರದಿಂದ ದೈನಂದಿನ ಘಟನಾವಳಿಗಳನ್ನು ಹೊತ್ತುಬರುತ್ತಿದ್ದ ಅಂದಿನ ಏಕೈಕ ದಿನ ಪತ್ರಿಕೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದ್ದನ್ನು ಇಲ್ಲಿ ಸ್ಮರಿಸಲೇಬೇಕು. ಸಮಾಜದ ಕಟ್ಟಕಡೆಯ ನೊಂದ ಜನರ ಧ್ವನಿಯಾಗಿದ್ದಕ್ಕೆ ಪತ್ರಿಕಾ ಬಳಗಕ್ಕೆ ಹೆಮ್ಮೆಇದೆ. ಆರಂಭದಲ್ಲಿ ಅಂದು ಮೂರೇ ಸಿಬ್ಬಂದಿಯಿಂದ ಕಾರ್ಯಾರಂಭ ಮಾಡಿದ್ದ ಮಲ್ಲಮ್ಮ ನುಡಿ ಪತ್ರಿಕಾ ಬಳಗ ಇಂದು ಸರಿ ಸುಮಾರು ಮುನ್ನೂರಕ್ಕೂ ಹೆಚ್ಚು ವರದಿಗಾರರನ್ನು ಹೊಂದಿದೆ. ಕೇಂದ್ರ ಕಚೇರಿಯಲ್ಲೂ ಹತ್ತು ಸಿಬ್ಬಂದಿಗೆ ಆಸರೆಯಾಗಿದೆ.



375ಕ್ಕೂ ಹೆಚ್ಚು ಸ್ಟಿಂಜರ್‌ಗಳ ಬಾಳು ಬೆಳಗಲು ಶ್ರಮಿಸುತ್ತೊರುವ ಮಲ್ಲಮ್ಮ ನುಡಿಯ ಕಾರ್ಯ ಎಲ್ಲೆಡೆ ಶ್ಲಾಘನೆಗೊಳ್ಳುತ್ತಿರುವುದು ದಾಖಲಾರ್ಹ ವಿಷಯ. ಹೀಗೆ.. ಒಂದೊಂದು ವರ್ಷ ಒಂದು ಹೊಸತನಕ್ಕೆ ನಾಂದಿಯಾಡುತ್ತಾ, ಇದೀಗ ಅಖಂಡ ಹದಿನಾಲ್ಕು ವಸಂತ ಪೂರ್ಣಗೊಳಿಸಿ, ಹದಿನೈದನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದೆ..! ಈ ಶುಭಸಂದರ್ಭದಲ್ಲಿ ಮಲ್ಲಮ್ಮ ನುಡಿ ಪತ್ರಿಕಾ ಬಳಗವು ಮತ್ತೊಂದು ಸಾಹಸಕ್ಕೆ ಕೈ ಹಾಕಿದೆ. ನಾಡ ಪುರೋಭಿವೃದ್ಧಿ, ಜನರ ಉನ್ನತಿ ಧ್ಯೇಯವಾಕ್ಯದಿಂದ ಆರಂಭವಾದ ಪತ್ರಿಕೆ ಸದಾ ವಿನೂತನ ಪ್ರಯೋಗ ಮಾಡುತ್ತಲೇ ಬಂದಿದೆ. ಈಗಾಗಲೇ ಹೇಳಿದಂತೆ ಗಡಿ ಜಿಲ್ಲೆಯ ಜನರ ಧ್ವನಿಯನ್ನು ರಾಜ್ಯಕ್ಕೆ ಮುಟ್ಟಿಸುವುದು, ಯಾವುದೇ ಒಂದು ಜಾತಿಗೆ ಸಿಮಿತವಾಗದೆ, ಸುದ್ದಿಗಳನ್ನು ನಿರ್ಭಯವಾಗಿ ಬರೆಯುವುದು, ಗಿಲೀಟು ವರದಿಗಳ ಜೋಲಿಗೆ ಹೋಗದೆ, ವರ್ತಮಾನಕ್ಕೆ ದನಿಯಾಗಿ, ಸತ್ಯಪರ, ದೈನಂದಿನ ಘಟನಾವಳಿಗಳಿಗೆ ಸಾಕ್ಷಿಯಾಗಲು ಪಣತೊಟ್ಟು ಮುನ್ನುಗ್ಗುತ್ತಿದೆ. ಸುದ್ದಿಯ ವಿಶ್ಲೇಷಣೆ, ಪುಟ ವಿನ್ಯಾಸದ ವಿನೂತನ ಶೈಲಿಯಿಂದ ಓದುಗರ ಮೆಚ್ಚುಗೆಗೆ ಪಾತ್ರವಾಗಿದ್ದು ಗೊತ್ತೇ ಇದೆ. ಯಾರ ಒತ್ತಡಕ್ಕೂ ಮಣಿಯದೆ, ರಾಷ್ಟ್ರ–ನಾಡಿನ ಹಿತಕ್ಕೆ ಬದ್ಧವಾಗಿ ನಿರಂತರವಾಗಿ ಪ್ರಕಟವಾಗುತ್ತಿರುವುದು ಪತ್ರಿಕೆಯ ಅಸ್ಮಿತೆಯ ಪ್ರತೀಕ. ಜೊತೆ ಜೊತೆಗೆ ಕನ್ನಡಿಗರ ಬೆಂಬಲ, ಹಿತೈಷಿಗಳ ಮಾರ್ಗದರ್ಶನ, ಜಾಹೀರಾತುದಾರರ ನಿತ್ಯ ಪ್ರೋತ್ಸಾಹದಿಂದ ಬೆಂಗಳೂರು, ಹುಬ್ಬಳ್ಳಿ, ಶಿವಮೊಗ್ಗ, ಮೈಸೂರು ಹಾಗೂ ಕಲ್ಬುರ್ಗಿ ಬ್ಯೂರೊಗಳನ್ನು ಡಿಕ್ಲೇರ್ ಮಾಡಿದೆ. ಬೀದರ್‌ನಿಂದ ಬೆಂಗಳೂರುವರೆಗೆ ರಾಜ್ಯಮಟ್ಟದ ಕನ್ನಡ ದಿನಪತ್ರಿಕೆಯಾಗಿ ಇಡೀ ಕರ್ನಾಟಕದಲ್ಲಿ ಪತ್ರಿಕೆ ಮನೆ ಮಾತಾಗಲು ತನು ಮನ ತ್ರಿಕರಣ ಸುದ್ಧಿಯಿಂದ ಶ್ರಮಿಸುತ್ತಿದೆ. ಇದಕ್ಕೆಲ್ಲಾ ಕಾರಣ ತಾವು, ತಮ್ಮ ಸಹಕಾರವೇ ನಮಗೆ ಭೀಮ ಬಲ. ಇಂದು ಮುಂದು ಎಂದೆಂದೂ ತಮ್ಮ ಬೆಂಬಲ ನಮಗಿರಲಿ ಎಂದು ಆಶಿಸುವ

–ರಮೇಶ್‌ರೆಡ್ಡಿ, ಸಂಪಾದಕ, ವ್ಯವಸ್ಥಾಪಕ ನಿರ್ದೇಶಕ

## ಕ್ಷೇತ್ರಕ್ಕೆ ರಾಜಶೇಖರ ಪಾಟೀಲರು ಅನಿವಾರ್ಯ



**ಹುಮನಾಬಾದ್:** ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಮಾಜಿ ಸಚಿವ ರಾಜಶೇಖರ ಬಿ. ಪಾಟೀಲ ಅವರಂತಹ ಅನುಭವಸಂಪನ್ನ ನಾಯಕತ್ವ ಅಗತ್ಯವಾಗಿದ್ದು, ಅವರು ಹುಮನಾಬಾದ್ ಕ್ಷೇತ್ರಕ್ಕೆ ಅನಿವಾರ್ಯರಾಗಿದ್ದಾರೆ ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ಸಿದ್ರಾಮ್ ವಾಘಮಾರೆ ತಿಳಿಸಿದ್ದಾರೆ. ಈ ಕುರಿತು ಮಾತನಾಡಿದ ಅವರು, ರಾಜಶೇಖರ ಪಾಟೀಲ ಅವರು ಸದಾ ಕ್ಷೇತ್ರದ ಜನರ ಮಧ್ಯೆಯೇ ಇದ್ದು ಅವರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದಾರೆ. ರಸ್ತೆ, ಕುಡಿಯುವ ನೀರು, ಶಿಕ್ಷಣ, ಆರೋಗ್ಯ ಸೇರಿದಂತೆ ಅನೇಕ ಅಭಿವೃದ್ಧಿ ಕಾರ್ಯಗಳಿಗೆ ಅವರು ನೀಡಿದ ಕೊಡುಗೆ ಅಪಾರವಾಗಿದೆ ಎಂದು ಹೇಳಿದರು. ಕ್ಷೇತ್ರದ ಅಭಿವೃದ್ಧಿ ಹಾಗೂ ಜನರ ಕಲ್ಯಾಣದ ದೃಷ್ಟಿಯಿಂದ ರಾಜಶೇಖರ ಪಾಟೀಲ ಅವರ ಸೇವೆ ಮಹತ್ವದ್ದಾಗಿದ್ದು, ಅವರ ನಾಯಕತ್ವದಲ್ಲಿ ಇನ್ನಷ್ಟು ಅಭಿವೃದ್ಧಿ ಕಾರ್ಯಗಳು ನಡೆಯಲಿವೆ ಎಂಬ ವಿಶ್ವಾಸ ಜನರಲ್ಲಿ ಇದೆ ಎಂದು ವಾಘಮಾರೆ ಅಭಿಪ್ರಾಯಪಟ್ಟರು. ಹುಮನಾಬಾದ್ ಕ್ಷೇತ್ರದ ಜನತೆ ರಾಜಶೇಖರ ಪಾಟೀಲ ಅವರ ಮೇಲೆ ಅಪಾರ ನಂಬಿಕೆ ಇಟ್ಟಿದ್ದು, ಮುಂದೆಯೂ ಅವರು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಾರೆ ಎಂದು ಹೇಳಿದರು.

## ಮಕ್ಕಳ ಬಗ್ಗೆ ಪೋಷಕರೇ ಎಚ್ಚರವಹಿಸಿ

- ವೀರೇಶ್ ಹೊಸಳ್ಳಿ, ಸಿಂಧನೂರು

ಬೇಸಿಗೆ ರಜೆ ಆರಂಭವಾಗಿದೆ ಬಿಸಿಲ ತಾಪ ಏರುತ್ತಿರುವ ಬೆನ್ನಲ್ಲೇ ಮಕ್ಕಳ ಆಟ ಆಡುವ ನೆಪದಲ್ಲಿ ತಂಪು (ಪಾನೀಯ) ಪಡೆಯಬೇಕು ಎನ್ನುವ ಹಂಬಲದೊಂದಿಗೆ ನೀರಿನಲ್ಲಿ ಈಜಲು ಹೋಗುವ ಸಾಧ್ಯತೆಗಳು ಇರುತ್ತವೆ. ಆದ್ದರಿಂದ ಪೋಷಕರೇ ಚಿಕ್ಕಮಕ್ಕಳ ಚಲನವಲನಗಳ ಬಗ್ಗೆ ಎಚ್ಚರದಿಂದ ಜಾಗರೂಕರಾಗಿರಿ ಯಾವುದೇ ಕಾರಣಕ್ಕೂ ಮಕ್ಕಳನ್ನು ಕರೆ –ಕಟ್ಟೆಗಳು ಕೃಷಿ ಹೊಂಡಗಳು ಬಳಿ ಬಿಡಬೇಡಿ ಎಂದು ಐಕ್ಯೂ ಇಂಟರ್ನ್ಯಾಷನಲ್ ಶಾಲಾ ಸಂಸ್ಥೆ ಮುಖ್ಯಸ್ಥ ರಾಘವೇಂದ್ರ ಅವರು ತಿಳಿಸಿದರು ಬೇಸಿಗೆ ಕಾಲ ಪ್ರಾರಂಭಿಸಿದ್ದು.

ಹಿನ್ನೆಲೆಯಲ್ಲಿ ಶಾಲೆಗಳಿಗೆ ಎರಡು ತಿಂಗಳ ರಜೆ ಘೋಷಿಸಲಾಗಿದೆ ಬೇಸಿಗೆ ರಜೆ ಬಂತೆಂದರೆ ಸಾಕು ತಂದೆ –ತಾಯಂದಿರು ಮಕ್ಕಳನ್ನು ಕರೆದು–ಕೊಂಡು ಹಳ್ಳಿಯಲ್ಲಿ ಇರುವ ಅಜ್ಜಿ– ತಾತ ಮನೆಗೆ ಹೋಗುವುದು ಬೇರೆ ಬೇರೆ ಊರುಗಳಲ್ಲಿ ಇರುವ ತಮ್ಮ ಸಂಬಂಧಿಕರ ಮನೆಗಳಿಗೆ ಮತ್ತು ತಮ್ಮ ತಮ್ಮ



ಕುಟುಂಬಕ್ಕೂ ಹತ್ತಿರವಾಗಿರುವ ಸ್ನೇಹಿತರ ಮನೆಗಳಿಗೆ ಅಥವಾ ಬೇರೆ ಬೇರೆ ಊರುಗಳಿಗೆ ಹೋಗಿ ಎಲ್ಲರೊಂದಿಗೆ ನಗುನಗುತ್ತಲೇ ಸಲ್ಪ ದಿನಗಳ ಕಾಲ ಕಳೆಯುವುದಕ್ಕೆ ಹೋಗಿರುತ್ತಾರೆ. ಏಕೆಂದರೆ ಬೇಸಿಗೆ ಕಾಲ ತಾಪ ಏರುತ್ತಿರುವ ಬೆನ್ನಲ್ಲೇ ತಂಪು ಪಡೆಯಲು ಮಕ್ಕಳು ಕರೆ –ಕಟ್ಟೆಗಳು ತೋಟದ ಹೊಲದಲ್ಲಿ ಇರುವ ಕೃಷಿ ಹೊಂಡಗಳು ಮತ್ತು ಬಾವಿಯಲ್ಲಿ ನೀರು ಕುಡಿಯುವುದಕ್ಕೆ ಅಥವಾ ಅಧಿಕ ಬಿಸಿಲು ತಾಪ ಏರುತ್ತಿರುವ ಬೆನ್ನಲ್ಲೇ ಮಕ್ಕಳು ನೀರಿನಲ್ಲಿ ಈಜಲು ಹೋಗುವ ಸಾಧ್ಯತೆಗಳು ಇರುತ್ತದೆ. ಪೋಷಕರೇ ಚಿಕ್ಕ ಮಕ್ಕಳಗಳ ಚಲನವಲನಗಳ ಬಗ್ಗೆ ಎಚ್ಚರವಹಿಸಬೇಕು ಎಂದು ಐಕ್ಯೂ ಇಂಟರ್ನ್ಯಾಷನಲ್ ಶಾಲಾ ಸಂಸ್ಥೆ ಮುಖ್ಯಸ್ಥ ಆಡಳಿತ ಮಂಡಳಿ ಅಧಿಕಾರಿ ರಾಘವೇಂದ್ರ ಅವರು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದರು.

## ಲಿಂಗತ್ವ ಅಲ್ಪಸಂಖ್ಯಾತ: ಸಮಾನ ಅವಕಾಶ ಕಲ್ಪಿಸಿ

- ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ

ಲಿಂಗತ್ವ ಅಲ್ಪಸಂಖ್ಯಾತರ ಮಕ್ಕಳಿಗು ಸಮಾಜದಲ್ಲಿ ಸಮಾನ ಅವಕಾಶಗಳನ್ನು ಕಲ್ಪಿಸಬೇಕೆಂದು ಜಾನಪದ ಅಕಾಡೆಮೆ ಮಾಜಿ ಅಧ್ಯಕ್ಷೆ ಪದ್ಮಶ್ರೀ ಮಂಜಮ್ಮ ಜೋಗತಿ ಮನವಿ ಮಾಡಿದರು.

ಸ್ಥಳೀಯ ಸಣಾಪುರ ರಸ್ತೆಯ ಶಾದಿ ಮಹಲಿನಲ್ಲಿ ಜೆಸಿಐ ಕಂಪ್ಲಿ ಸೋನಾ ಘಟಕವು ಏರ್ಪಡಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ಹದಿಹರೆಯದ ಹುಡುಗಿಯರ ಆರೋಗ್ಯದ ಬಗ್ಗೆ ಮುಂಜಾಗ್ರತಾ ಕ್ರಮಗಲ ಕುರಿತು ವೈದ್ಯರಾದ ಡಾ.ಹಾರಿಕ ವಿಶೇಷ ಉಪನ್ಯಾಸವನ್ನು ನೀಡಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಾಗೂ ಸರ್ಕಾರಿ ಮಹಿಳಾ ನೌಕರರನ್ನು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿದರು. ಸಮಾರಂಭದಲ್ಲಿ ಜೆಸಿಐ ಕಂಪ್ಲಿ ಸೋನಾ ಘಟಕದ ಅಧ್ಯಕ್ಷ ಡಾ.ಭರತ್ ಪದ್ಮಶಾಲಿ, ಜೆಸಿಐ ವಲಯ 24ರ ಸಂತೋಷ ಕೊಟ್ರಪ್ಪ ಸೋಗಿ, ಡಾ.ಶ್ರದ್ಧಾ ಭರತ್ ಪದ್ಮಶಾಲಿ, ಡಿ.ಪೂಜಾ



ಭರತ್, ಡಾ.ಶಾರದಾ ಭರತ್, ಅಮೃತಾ ಸಂತೋಷ್, ವಕೀಲೆ ವಿಜಯಲಕ್ಷ್ಮಿ ಮರಿಶೆಟ್ರು, ಜಯಲಕ್ಷ್ಮಿ, ಸ್ವಾತಿ ಜೀವನ್, ಪ್ರಾಚಾರ್ಯ ಮದ್ದಾನಪ್ಪ, ಮನೋಜ್ ದಾನಪ್ಪ, ವೆಂಕಟಸಪ್ತಗಿರಿ, ಸಿದ್ಧರಾಮೇಶ್ವರ, ಮಾನಸ, ಸೋಹಲ್, ಚಿನ್ನ, ವಿಷ್ಣು ಹಾಗೂ ಇತರರು ಇದ್ದರು.

30–ಕಂಪ್ಲಿ–3– ಪಟ್ಟಣದ ಸಣಾಪುರ ರಸ್ತೆಯ ಶಾದಿಮಹಲಿನಲ್ಲಿ ಜೆಸಿಐ ಕಂಪ್ಲಿ ಸೋನಾ ಘಟಕ ಏರ್ಪಡಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಪದ್ಮಶ್ರೀ ಮಂಜಮ್ಮ ಜೋಗತಿಯನ್ನು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿದರು.

## ಶ್ರಮದ ಮೂಲಕ ಜನರ ಮನಗೆದ್ದ ಜನ ಮಾನಸದ ಜನ ನಾಯಕ

**ಮೊದಲನೆಯ ಪುಟದಿಂದ...**

ಅವರಿಗೆ ಸಹಾಯ ಮಾಡಿ. ಬಡವರಿಗೆ, ಅಭಾಗ್ಯರಿಗೆ, ಅನಾಥರಿಗೆ ಸ್ಪಂದಿಸಿ ಎಂದು ಸಲಹೆ ನೀಡುವ ಸರಳ ಸಜ್ಜನಿಕೆಯ ನಾಯಕರಾಗಿದ್ದಾರೆ.

ಅಲ್ರೀ ಸರ್, ಇಡೀ ಕ್ಷೇತ್ರದ ಪ್ರಗತಿಯ ಬಗ್ಗೆ ಸದಾ ಕನಸು ಕಾಣುತ್ತೀರಿ. ಇಲ್ಲಿನ ಜನರ ಕಷ್ಟ ಸುಖಗಳಿಗೂ ಸದಾ ಸ್ಪಂದಿಸುತ್ತೀರಿ. ಕ್ಷೇತ್ರದ ಜನರಿಗಾಗಿ ಪ್ರತಿ ದಿನ ಎಷ್ಟು ಖರ್ಚು ಮಾಡುತ್ತೀರಿ? ಎಂದು ಅವರ ಹಿತೈಷಿಳು ಅಭಿಮಾನದಿಂದ ಕೇಳಿದ ಪ್ರಶ್ನೆಳಿಗೆ ಮುಂದಹಾಸ ಬೀರುವರ ಪಾಟೀರು, ಬಲಗೈಯಿಂದ ಕೊಟ್ಟದ್ದು ಎಡಗೈಗೆ ಗೊತ್ತಾಗಬಾರದು ಅಂತ ನಮ್ಮಪ್ಪ ನಮಗೆ ಕಲಿಸಿದ ಸಂಸ್ಕಾರ ಬ್ರದರ್. ನಾವು ಎಷ್ಟು ದಿನ ಬದುಕುತ್ತೀವಿ ಅನ್ನೋದು ಮುಖ್ಯವಲ್ಲ, ಇದ್ದಷ್ಟು ದಿನ ಜನರಿಗೆ ನಾವು ಎಷ್ಟು ಸಹಾಯ ಮಾಡಿದ್ದೀವಿ ಅನ್ನೋದು ಮುಖ್ಯ ಎಂದು ಜನರ ನಡುವೆ ನಡೆದಾಡುವ ಸಂತರಂತೆ ಉತ್ತರ ಕೊಡುತ್ತಾರೆ..! ಒಬ್ಬ ನಿಜವಾದ ಜನಪರ ಕಾಳಜಿ ಇರುವ ಹಾಗೂ ಜನನಾಯಕರಿಗೆ ಇರಬೇಕಾದ ಎಲ್ಲಾ ಮೌಲಿಕ ಗುಣಗಳಿಗೂ ಸಾಕ್ಷಿಯಾಗಿರುವ ಪಾಟೀಲರು, ಬೆಂಗಳೂರಿನಲ್ಲಿ ಇದ್ರೂ ಕ್ಷೇತ್ರದ ಜನರ ಬಗ್ಗೆ ಯೋಚಿಸುತ್ತಾರೆ, ಹುನಾಬಾದ್‌ನಲ್ಲಿದ್ದರೂ ನಾಗರಿಕರ ಕುರಿತು ಚಿಂತಿಸುತ್ತಾರೆ ಎನ್ನುವ ಪ್ರತೀತಿಗೂ ಕಾರಣೀಭೂತರಾಗಿದ್ದಾರೆ. ಒಬ್ಬ ಜನಮಾನಸ ನಾಯಕರಿಗೆ ಇದಕ್ಕಿಂತ ಇನ್ನೇನು ಬೇಕಿದೆ ಹೇಳಿ..?!

### ಹುಮನಾಬಾದ್ ಕ್ಷೇತ್ರಕ್ಕೆ ರಾಜಶೇಖರ ಪಾಟೀಲರ ಪ್ರಮುಖ ಕೊಡುಗೆಗಳು

**ಕ್ಷೇತ್ರದ ಅಭಿವೃದ್ಧಿಗೆ ಹಗಲಿರುಳೂ ಶ್ರಮ. ಪ್ರಗತಿ ದೃಷ್ಟಿಯಿಂದ ಹಲವಾರು ಪ್ರತಿಷ್ಠಿತ ಯೋಜನೆಗಳ ಮಂಜೂರು ಮಾಡಿಸಿ, ಜಾರಿಗೊಳಿಸಿದ ಹೆಗ್ಗಳಿಗೆ ಪಾಟೀಲರಿಗೆ**

**–ಹುಮನಾಬಾದ್ ಕ್ಷೇತ್ರದ ಗ್ರಾಮೀಣ ರಸ್ತೆ, ನೀರು, ಶಿಕ್ಷಣ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ತರಲು ಅವರಿಂದ ಪ್ರಾಮಾಣಿಕ ಪ್ರಯತ್ನ.**

**–ಶಾಸಕರಾಗಿ ನಿರಂತರ ಸೇವೆ. 2008ರಿಂದ 2023ರವರೆಗೆ ಹುಮನಾಬಾದ್ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗಿ ಜನರ ಸಮಸ್ಯೆಗಳಿಗೆ ಸ್ಪಂದಿಸಿದ ಕೀರ್ತಿ. –ರಾಜ್ಯ ಸಚಿವರಾಗಿ ಕಾರ್ಯ, 2018ರಲ್ಲಿ ಕರ್ನಾಟಕ ಸರ್ಕಾರದಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸಚಿವರಾಗಿ ಕಾರ್ಯನಿರ್ವಹಿಸಿ ರಾಜ್ಯದ ಪ್ರಗತಿ ವಿಶೇಷ ಕೊಡುಗೆ –ರಾಜ್ಯದ ಸರಕು, ಜನರ ಪ್ರಯಾಣದ ಅನುಕೂಲಕ್ಕೆ ರೈಲು ಮತ್ತು ಮೂಲಸೌಕರ್ಯ ಅಭಿವೃದ್ಧಿ, ಹುಮನಾಬಾದ್, ಬೀದರ ರೈಲು ಮಾರ್ಗ ಯೋಜನೆ ಮುಂತಾದ ಅಭಿವೃದ್ಧಿ ಕಾರ್ಯಗಳಿಗೂ ನಾಂದಿ.**

## 5ಲಕ್ಷ ರೂ ನೆರವು: ಸಂಕೇಶ್ವರ ಅವರಿಗೆ ಧನ್ಯವಾದಗಳು

**ಬೆಂಗಳೂರು:** ರಾಜ್ಯ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಕೆ.ಶಂಭುಲಿಂಗ ಅವರ ತುರ್ತು ಚಿಕಿತ್ಸೆಗೆ ಗಿಖಐ ಸಮೂಹ ಸಂಸ್ಥೆ ಛೇರ್ಮನ್ ಡಾ.ವಿಜಯ ಸಂಕೇಶ್ವರ ಅವರು ನೆರವಿನ ಹಸ್ತ ಚಾಚಿದ್ದಾರೆ. ಪತ್ರಿಕಾ ವಿತರಕರ ಸಂಘಟನೆಗಾಗಿ ಅವಿರತವಾಗಿ ದುಡಿದ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಕೆ.ಶಂಭುಲಿಂಗ ಅವರು ತೀವ್ರ ಅನಾರೋಗ್ಯದಿಂದ ಆಸ್ಪತ್ರೆಯಲ್ಲಿದ್ದಾರೆ. ಈಗಾಗಲೇ 16ಲಕ್ಷಕ್ಕೂ ಹೆಚ್ಚು ವೆಚ್ಚವಾಗಿದ್ದು, ಇನ್ನೂ 20 ಲಕ್ಷ ಅಗತ್ಯವಿದೆ. ಈ ಸಂಕಷ್ಟದ ಹೊತ್ತಿನಲ್ಲಿ ಚಿಕಿತ್ಸಾವೆಚ್ಚಕ್ಕೆ ಗಿಖಐ ಸಮೂಹ ಸಂಸ್ಥೆ ಛೇರ್ಮನ್ ಡಾ.ವಿಜಯ ಸಂಕೇಶ್ವರ ಅವರು 5ಲಕ್ಷ ರೂ ನೆರವು ನೀಡಿದ್ದಾರೆ. ಉದಾರತೆಯಿಂದ ನೆರವು ನೀಡಿದ ಗಿಖಐ ಸಮೂಹ ಸಂಸ್ಥೆ ಛೇರ್ಮನ್ ಡಾ.ವಿಜಯ ಸಂಕೇಶ್ವರ ಅವರು ಮತ್ತು ಎಂಡಿ ಆನಂದ ಸಂಕೇಶ್ವರ ಅವರಿಗೆ ವಿತರಕರು ಮತ್ತು ಪತ್ರಕರ್ತರ ಪರವಾಗಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರು ಧನ್ಯವಾದಗಳನ್ನು ಸಲ್ಲಿಸಿದ್ದಾರೆ.







Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)